ತಾರೀಖು 24ನೇ ಮಾರ್ಚ 1885.

ನಂ. 242.—ಬೆಂಗಳೂರು ಮೊಕ್ತಾಂ ಸ್ಕ 1881ನೇ ಇಸವಿ ಆಗಸ್ಟ್ 2ನೇ ಸುಕ್ತಂ 3662—70—98ನೇ ನಂಬರುಳ್ಳ ಶ್ರೀಮ್ ಮಹಾರಾಜಾ ಸರ್ಕಾರದವರ ಹುಕುಮಿನಿಂದ, ಜಾರಿಯಲ್ಲಿರತಕ್ಕ ಲ್ಯಾಂಡ್ ರವಿನ್ಯೂ ಕಾನೂನಿಗನುಸಾರವಾಗಿ ಮೈಸೂರು ದೇಶದಲ್ಲಿಯ ಕಾಫಿ ಸಾಗುವಳಿ ಜಮೀನ್‌ಗಳ ಮೇಲೆ ಎಕರೇಜ್‌ಯೂನಿ ಎಕರೆ ಬೀಜವರೀ ಮೇಲೆ ಕಂದಾಯ ಹಾಕುವದರ ಮೂಲಕ ಫೈಸಲಾತಿಯು ಮಂಜೂರ್ ಮಾಡಲ್ಪಟ್ಟಿದ್ದರಿಂದಲೂ, ಅಂಥಾ ಫೈಸಲಾತಿಯು ಹಾಲಿ ಪ್ರಾಯೋಗಿಕ ಪೂರ್ತಿಯಾಗಿರುವದರಿಂದಲೂ, ಶ್ರೀಮ್ ಮಹಾರಾಜಾ ಸರ್ಕಾರದವರು ಇದಕ್ಕೆ ಸಂಬಂಧಪಟ್ಟ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಇದರಮಿ ಕಂಡಂತೆ ಇದರ ಪೈಕಿಯಿಂದ ಪ್ರಕಟಪಡಿಸುತ್ತಾರೆ:—

1ನೇದು:—ಕಾಫಿ ಮತ್ತು ಇಲಾಚಿ ಮೇಲಿನ ಹಾಳಿತ ತೀರ್ವೆಯು, ಮೇಲ್ಕಂಡ ಫೈಸಲಾತಿ ತಾರೀಖು ಮೊದಲು ಮೋಕೂಫ್ ಮಾಡಲ್ಪಟ್ಟಿರುತ್ತೆ.

2ನೇದು.—ಜಾರಿಯಲ್ಲಿರುವ ಕಾನೂನ ಅನುಸರಿಸಿ, ಸದರೀ ಫೈಸಲಾತಿಗೆ ವಳಪಟ್ಟು ಜಮೀನ್‌ಗಳಿಗೆ ಅವುಗಳಲ್ಲಿ ಬೆಳೆದಾದರೂ ಫಸಲು ಇಡಲ್ಪಟ್ಟಿತ್ತೆಂಬ ಸಬಬಿನ ಮೇಲೆ ಹಾಸ್ತು ಲ್ಯಾಂಡ್ ರವಿನ್ಯೂ ಯಾನೆ ಜಮೀನ್ ಕಂದಾಯ ಹೊಕರ್ಮಾಡಲ್ಪಡತಕ್ಕದ್ದಲ್ಲವು.

3ನೇದು —ಕೇಂದಿ ಮತ್ತು ಇತರ ಕಂಟ್ರಾಕ್ಟ್ದಾರರು ವೇಟೀಲ್ ಜಂಗಲಿ ಮತ್ತು ಬಿಲ್ಲರೆ ಇಜಾರೆದಾರರು, ಮೇಲ್ಕಂಡ ಸದರೀ ಫೈಸಲಾತಿಗೆ ವಳಪಟ್ಟ ಜಮೀನ್‌ಗಳಲ್ಲಿ ಅವುಗಳ ಅನುಭವದಾರರ ಅನುಮತಿ ಹೊರತಾಯಿ ಪ್ರವೇಶಿಸುವದಕ್ಕೆ ಇದರ ಬೆಕೆಯಿಂದ ನಿಷೇಧಿಸಲ್ಪಟ್ಟಿರುತ್ತಾರೆ.

4ನೇದು.—ಕೇಂದಿಯು ಸರಕಾರದ ವಟ್ಟು ಹಕ್ಕಿನದಾದ್ದರಿಂದ, ಜಾರಿಯಲ್ಲಿರುವ ಕಾನೂನ್‌ಗಳನುಸರಿಸಿ, ಸದರೀ ಫೈಸಲಾತಿಯು ಲಗಾವ್ ಮಾಡಲ್ಪಟ್ಟ ಜಮೀನ್‌ಗಳಲ್ಲಿರತಕ್ಕ ಬಗನಿ ವ ಇತರ ಮರಗಳಿಂದ ಮಾನಾಟಿವ ಬಗ್ಗೆ ಕೇಂದಿ ಇಳಿಸುವ ಅಧಿಕಾರವು ಗವರ್ನ್‌ಮೆಂಟ್ ತರಫಿನ ಕಂಟ್ರಾಕ್ಟ್ದಾರನಿಗೆ ಹೊರ್ತು ಮತ್ಯಾರಿಗ್ಲೂ ಇರುವದಿಲ್ಲ. ಅಂಥಾ ಜಮೀನಿನ ಹಿಡುವಳಿದಾರರು ತಮ್ಮ ಮನೆ ಉಪಯೋಗದ ಬಗ್ಗೆ ಅಂದರೆ, ಕೊಟ್ಟಿ ವಶಂಕಾವ ತಯಾರಿಸ್ಕೊರ ಬಗನಿ ವ ಇತರ ಮರಗಳಿಂದ ಕೇಂದಿ ಇಳಿಸುವ ಪಕ್ಕೆ ಇದರ ಬೆಕೆಯಿಂದ ಅಪ್ಪಣೆ ಕೊಡಲ್ಪಟ್ಟಿರುತ್ತಾರೆ.

5ನೇದು.—(a) ಯಾವ ಜಮೀನ್‌ಗಳಿಗೆ ಮೇಲ್ಕಂಡ ಫೈಸಲಾತಿಯು ಲಗಾವ್ ಮಾಡಲ್ಪಟ್ಟು ಪೂರ್ತಿಯಾಗಿ ಎಕರೇಜ್ ಕಂದಾಯವು ಕಾಯವಾಗಿ ಆಗಲಿ 30 ವರುಷ ಕಾಲದ ಪರಿಯಂತರವಾಗಲಿ ಹಾಕಲ್ಪಟ್ಟಿಧೆಯೋ, ಅಂಥಾ ಜಮೀನ್‌ಗಳಲ್ಲಿ ಬೆಳದಿರತಕ್ಕ್ಕಯಾ ಬೆಳೆಯುವ ಇದರಬಾಜಾದಲ್ಲಿ ಕಂಡ ಏಳು ಜಾತಿಮರಗಳ ಹಕ್ಕುದಾರಿಯು ಸರಕಾರಕ್ಕೆ ಕೀರಿದ್ದಾಗಿನತಕ್ಕದ್ದು. ಪರಂತು ಮೇಲ್ಕಂಡ ಜಮೀನ್‌ಗಳ ಹಿಡುವಳೀದಾರರು, ಸಂದಲ್ ವಿನಾ ಸದರಿ ಮರಗಳ ನಾಟಾವನ್ನು ವಾಸ್ತವ್ಯವಾಗಿ ತಮ್ಮ ಸ್ವಂತ ಕೆಲಸಗಳ ಬಗ್ಗೆ ಬಗರ್ ರುಸುಂ ಉಪಯೋಗಿಸಿಕೊಳ್ಳುವ ಬಗ್ಗೆ ಅವಕಾಶ ಕೊಡಲ್ಪಡತಕ್ಕದ್ದು.

| | |
|---|---|
| 1 ಹೊನ್ನೆ | 5 ತೇಗ |
| 2 ಅರಗಿನಮರ | 6 ಕರಿಮರ |
| 3 ನಂದಿ | 7 ಸಂದಲ್ |
| 4 ಪೂಣ | |

(b) ಪೂರ್ತಿಯಾವ ಎಕರೇಜ್ ಕಂದಾಯವು ಕಾಯವಾಗಿ ಆಗಲಿ 30 ವರುಷ ಕಾಲದ ಪರಿಯಂತರಕ್ಕಾಗಲಿ ಮಾವತಿ ಮಾಡುವಂಥಾ ಮೇಲ್ಕಂಡ ಜಮೀನ್‌ಗಳ ಹಿಡುವಳೀದಾರರು, ಮೇಲ್ಕಂಡ ಮರಗಳ ಪೈಕಿ ಸಂದಲ್ ವಿನಾ ಇತರ ಮರಗಳ ಸರಕಾರದ ಹಕ್ಕುದಾರಿಯನ್ನು ಅವುಗಳ ತಾತ್ಕಾಲಿಕ ಖರೀದಿಯು ನ್ಯಾಯವಾಗಿ ಮತ್ತು ಜಾರಿಯಾಗಿ ಆದಾಜ್ ಮಾಡಲ್ಪಟ್ಟು ಕೊಂಡುಕೊಳ್ಳುವ ಬಗ್ಗೆ ಅಪ್ಪಣೆ ಕೊಡಲ್ಪಡತಕ್ಕದ್ದು. ಖರೀದಿ ಮೊಬಲಗು ಸರಕಾರದ ವರಿಗೆ ನ್ಯಾಯವಾಗಿ ತೋರಿಬರುವ ಖಿಸ್ತುಗಳ ಪ್ರಕಾರ ಪಾವತಿ ಮಾಡಲ್ಪಡತಕ್ಕದ್ದು. ಮೇಲೆ ವಿಧಿಸಿರುವ ಪ್ರಕಾರ ಸರಕಾರದ ಹಕ್ಕುದಾರಿಯು ಹಿಡುವಳೀದಾರನಿಂದ ಕೊಂಡುಕೊಳ್ಳಲ್ಪಡದೆ ಇರುವ ಪಕ್ಷಕ್ಕೆ, ಹಿಡುವಳೀದಾರನಿಂದ ವಾಸ್ತವ್ಯವಾಗಿ ಅವನ ಸ್ವಂತ ಕೆಲಸಕ್ಕೆ ಅಲ್ಲದೆ ಅನ್ಯಥಾ ಕಡಿಯಲ್ಪಡುವ (ಸಂದಲ್ ವಿನಾ) ಮೇಲ್ಕಂಡ ತರಾಂ ಮರಗಳ ಮೇಲೂ ಸರಕಾರದಿಂದ ಸೀನಿಯರೇಜ್ ಯಾನೆ ಬಂದು ತೀರ್ವೆಯು ವಸೂಲ್ಮಾಡಲ್ಪಡುವದು.

(c) ಮೇಲ್ಕಂಡ ಜಮೀನ್‌ಗಳಲ್ಲಿ ಬೆಳದಿರುವ ಯಾ ಬೆಳೆಯುವ ಸಂದಲ್ ಮರಗಳು ಗವರ್ನ್‌ಮೆಂಟಿನಿಂದ ಯಾ ಅವರ ಅಪ್ಪಣೆ ವಿನಾ ಕಡಿಯಲ್ಪಡಕೂಡದು, ಪುದಯೋಗಿಸಲ್ಪಡಕೂಡದು ಯಾ ವಿಲೇವಾರಿ ಮಾಡಲ್ಪಡಕೂಡದು.

6ನೇದು.—ಹುಲ್ಲುಗಾವಲ್ ಕಂದಾಯಕ್ಕೆ ಕೊಡಲ್ಪಟ್ಟ ಜಮೀರ್ಗಳಲ್ಲಿ ಬೆಳೆದಿರುವ ಯಾ ಬೆಳೆಯುವಂಥಾ ಬಾಜಾರದಲ್ಲಿ ನಮೂದಾದ ಉಳಿಕೊಳ್ಳೋಣಾದ ಒಂಭತ್ತು ಜಾತಿ ಮರಗಳ ಬಾಬತು ಗವರ್ಮೆಂಟ್ ಹಕ್ಕುದಾರಿಯು ಸರ್ಕಾರಕ್ಕೆ ಉಳಿಸಿಕೊಳ್ಳಲ್ಪಟ್ಟಿರುತ್ತೆ. ಯಾತಕ್ಕಂದರೆ ಹುಲ್ಲುಬನ್ನಿ ಹಿಡುವಳಿಯಿಂದ ಹುಲ್ಲು ಮೇಯಿಸಿಕೊಳ್ಳುವ ಮತ್ತು ಸವದೆ ಬೆಳದುಕೊಳ್ಳುವ ಹಕ್ಕುದಾರಿ ಮಾತ್ರವೇ ಉಂಟುಮಾಡಲ್ಪಡುವದು. ಅಂಥಾ ಜಮೀರ್ಗಳಲ್ಲಿ ಪ್ರಾಯೇಣ ವಿಶೇಷ ಜಂಗ್ಲಿಗಳು ಇರುತ್ತವೆ. ಹುಲ್ಲು ಬನ್ನಿಗೆ ಪಡೆವ ಜಮೀರ್ಗಳ ಹಿಡುವಳೀದಾರರು ಅಂಥಾ ಮರಗಳ ಪೂರ್ತಿಯಾದ ಖರೀದಿಯನ್ನು ಪಾವತಿ ಮಾಡುವದರ ಮೂಲಕ ಈ ಹಕ್ಕನ್ನು ಪಡೆಯುವ ಪರಿಯಂತ, ಮನ್ನಾ ಜಾತಿ ಮರಗಳನ್ನು ಕಡಿಯುವ ವಿಷಯದಲ್ಲಿ ಹಾಲೀ ಜಾರೀ ಇರತಕ್ಕ ನಿರ್ಬಂಧಗಳು ಸದರೀ ಜಮೀರ್ಗಳಲ್ಲಿ ಬೆಳೆಯುವ ಅಂಥಾ ಮರಗಳ ವಿಷಯದಲ್ಲಿಯೂ ಅನ್ವಯಿಸತಕ್ಕದ್ದು.

| | |
|---|---|
| 1 ಹೊನ್ನೆ | 6 ಕರೀಮರ |
| 2 ಅರಗಿನಮರ | 7 ಸಂದಲ್‌ಮರ |
| 3 ನಂದಿ | 8 ಕಾಡುಹಲಸು |
| 4 ಪೂವ | 9 ಕಾಡಾಚಿ |
| 5 ತೇಗ | |

7ನೇದು—ಮೇಲ್ಕಂಡ ಸದರೀ ಫೈಸಲಾತಿಗೆ ಸಂಬಂಧಪಟ್ಟ ಯಾವ ಜಮೀನಿನ ಮೇಲ್‌ಭಾಗದಲ್ಲಾಗಲಿ ಕೆಳಭಾಗದಲ್ಲಾಗಲೀ ಇರುವಂತೆ ತಿಳಿದುಬರುವ ಯಾ ಐಯಿಂದ ಯಾವ ಕಾಲದಲ್ಲಾಗಲೀ ಕಾಣಬರುವ ರತ್ನಗಳು, ಭಂಗಾರ ಮತ್ತು ಇತರ ಲೋಹ ಪದಾರ್ಥಗಳು ಯಾ ಕಲ್ಲಿದ್ದಲು, ಅಥವಾ ರತ್ನಗಳು, ಭಂಗಾರ ಯಾ ಇತರ ಲೋಹ ಪದಾರ್ಥಗಳು ಅಥವಾ ಕಲ್ಲಿದ್ದಲು ಇವುಗಳಿಗಿರತಕ್ಕಂಥಾ ಯಾ ಆಡಗಿರುವಂತೆ ಊಹಿಸಲ್ಪಡುವಂಥಾ ಕಲ್ಲು ಯಾ ಬಂಡೆ, ಇವುಗಳಿಗೆ ಯಾ ಇವುಗಳಲ್ಲಿರು ಹಕ್ಕುದಾರಿಯು ಇದರಡೀ ಕಂಡ ಪರತ್ತುಗಳಿಗೆ ಬಳಪಟ್ಟು ಗವರ್ಮೆಂಟಿಗೆ ಬೀರಿದ್ದಾಗಿರುತ್ತೆ: ಹ್ಯಾಗಂದರೆ:—

(a.) ಗವರ್ಮೆಂಟಿನವರಿಂದ ಉಳಿಕೊಳ್ಳಲ್ಪಟ್ಟ ಯಾವದಾದರೂ ಅಧಿಕಾರಗಳನ್ನು ಚಲಾಯಿಸುವದರಲ್ಲಿ, ಗವರ್ಮೆಂಟಿನವರಾಗಲೀ ಯಾ ಅವರ ಆಫೀಸರರಾಗಲೀ ಪೂರ್ತಿಯಾದ ಎಕರೇಜ್ ಕಂದಾಯ ತೆರತಕ್ಕಂಥಾ ಯಾವದಾದರೂ ಜಮೀನಿನಲ್ಲಿ ಪ್ರವೇಶಿಸಿ ಅಲ್ಲಿ ಗಣಿ ಅಗೆದರೆ, ಅಂಥಾ ಜಮೀನಿನ ಹಿಡುವಳೀದಾರನು, ಗವರ್ಮೆಂಟಿನವರಿಂದಾಗಲೀ ಅವರ ಆಫೀಸರರಿಂದಾಗಲಿ ಉಂಟುಮಾಡಲ್ಪಟ್ಟ ಯಲ್ಲ ನಷ್ಟಗಳಿಗೂ ಪೂರಾ ಈಡು ಮೊಬಲಗು ಹೊಂದುವದಕ್ಕೆ ಅನ್ಯನಾಗಿರತಕ್ಕದ್ದು; ಮತ್ತು

(b.) ಸ್ಯ 1881ನೇ ಇಸವಿ ಜುಲೈ 26ನೇ ದಿವಸದಲ್ಲಿ ದಿವಾನರವರ ಇನ್ಸ್ಟ್ರಾಕ್ಷನಿಯ ಪರತ್ತುಗಳ ಮೇರೆಗೆ ಖಾಯ್ತವಾಗಿ ಗೊತ್ತುಮಾಡಲ್ಪಟ್ಟ ಪೂರ್ತಿಯಾದ ಎಕರೇಜ್ ಕಂದಾಯ ವೊಕರ್ರಾಡಲ್ಪಟ್ಟ ಅಂಥಾ ಯಾವದಾದರೂ ಜಮೀನಿನ ಹಿಡುವಳೀದಾರನು, ಮೇಲ್ಕಂಡ ಜಮೀರ್ಗಳ ಮೇಲೆ ಯಾ ಕೆಳಭಾಗದಲ್ಲಿ ಕೃಷಿಮಾಡುವದಕ್ಕೂ ರತ್ನಗಳು, ಭಂಗಾರ ಯಾ ಇತರ ಲೋಹ ಪದಾರ್ಥಗಳು ಅಥವಾ ಕಲ್ಲಿದ್ದಲು ಇವುಗಳನ್ನು ಪಡೆಯುವದಕ್ಕೂ ಸದರೀ ಹಿಡುವಳೀದಾರನು ಆದಿ ಬಾಧ್ಯನ್ನತನೆಂದು ಗವರ್ಮೆಂಟಿನವರು ಯಾವಾಗ್ಯೂ ಅಂಗೀಕರಿಸತಕ್ಕದ್ದು; ಪರಂತು ಹಾಂಗೆ ಪಡೆಯೋಣಾದ ಭಂಗಾರ ಯಾ ಇತರ ಲೋಹ ಪದಾರ್ಥಗಳು ಅಥವಾ ಕಲ್ಲಿದ್ದಲು ಇವುಗಳ ವೆಟ್ಟು ಹುಟ್ಟುವಳಿ ಮೇಲೆ ಕೇಕಡಾ 5ಕ್ಕೆ ಜಾಸ್ತಿಯಾಗದ ದರದಂತೆಯೂ ಸದರೀ ಜಮೀನಿನ ಕೆಳಭಾಗದಿಂದಾಗಲೀ ಮೇಲ್‌ಭಾಗದಿಂದಾಗಲೀ ಹೊಂದಬಹುದಾದ ಅಂಥಾ ರತ್ನಗಳ ಮಾರಾಟದ ಖರೀದಿ ಮೇಲೆ ಕೇಕಡಾ 10ಕ್ಕೆ ಜಾಸ್ತಿಯಾಗದ ದರದಂತೆಯೂ ಬಂದು ರಾಜಪಾಲು ತೆರುವವಕ್ಕೆ ಒಳಪಟ್ಟಿರತಕ್ಕದ್ದು.

8ನೇದು.—ಪರಂತು ಮೇಲಿನ ಕಡೇ ಕ್ಲಾಜಿನಲ್ಲಿ ಯೇನು ಅವಗಿಯಿದ್ದಾಗ್ಯೂ ಸರಿಯೇ, ಮೇಲೆ ಕಂಡ ಫೈಸಲಾತಿಯು ಲಾಗಾವಾಗುವ ಯಾವದಾದರೂ ಜಮೀನಿನ ಮೇಲ್‌ಭಾಗದಿಂದ ಯಾ ಕೆಳಭಾಗದಿಂದ ತೆಗೆಯಲ್ಪಡುವ ಲೋಹಗಳು ಯಾ ಕಲ್ಲಿದ್ದಲು ಅಥವಾ ರತ್ನಗಳು ವಿನಾ, ಇತರಗಳಾದ ಸುಣ್ಣದ ಕಲ್ಲು, ಕಲ್ಕೇಕಲ್ಲು ಮತ್ತು ಸಾಧಾರಣವಾದ ಲೋಹ ಪದಾರ್ಥಗಳು ಇವುಗಳು ಪೂರಾಪಕ್ಕೆ ಅಲ್ಲದೆ ವಾಸ್ತವ್ಯವಾಗಿ ಹಿಡುವಳೀದಾರನ ಸ್ವಂತ ಕೆಲಸಕ್ಕೆ ಉಪಯೋಗಿಸಲ್ಪಟ್ಟಾಗ ಅಮೇಲೆ ಮೇಲೆ ರಾಜಪಾಲು ವಸೂಲ್ಮಾಡಲ್ಪಡತಕ್ಕದ್ದಲ್ಲವು.

9ನೇದು.—(a.) ಮೇಲೆ ಕಂಡ ಫೈಸಲಾತಿಯ ಪರತ್ತುಗಳ ಪ್ರಕಾರ ಏಯೆಂಪಿ ದರಖಾಸ್ತು ಮೂಲಕ ಆಪೇಕ್ಷಿಸುವ ಬಂಜರ್ ಜಮೀನುಗಳು, ಆವುಗಳ ಸರಕಾರ ಕಂದಾಯದ ವಿಷಯದಲ್ಲಿ ಇದರಡಿ ಕಂಡ ರಿಯಾಯತಿಗಳಿಗೆ ಒಳಪಟ್ಟು ಕೊಡಲ್ಪಡುವವು:—

| | | |
|---|---|---|
| ಮೊದಲು 3 ವರುಷಗಳಿಗೆ | .. .. | ಬಗರ್ ಕಂದಾಯ. |
| ತರುವಾಯದ 2 ವರುಷಗಳಿಗೆ | .. .. | ಅರ್ಧ ಕಂದಾಯ. |
| ಆರನೇ ವರುಷದಾರಭ್ಯ ಮತ್ತು ಆ ತರುವಾಯ | .. | ಪೂರಾ ಕಂದಾಯ. |

(h.) ಸದರೀ ಜಮೀನುಗಳು, ಸಾಧಾರಣವಾಗಿ ಸರ್ವೆ ಖಡೂಗಳು ಮತ್ತು ಮೇಲಿನ 5—6ನೇ ಕ್ಲಾಜ್‌ಗಳಲ್ಲಿ ವಿವರಿಸಲ್ಪಟ್ಟ ಸಂದಲ್ ವಿನಾ ಇತರ ಮೆನ್ನಾ ಜಾತಿ ಮರಗಳ ಕಿಮ್ಮತ್ ದೇಖೀಲ್ ಗೊತ್ತಾದ ಸರ್ಕಾರ್ ಸಾಲಿಗೆ ಒಳಪಟ್ಟು ಬಹಿರಂಗವಾದ ಹರಾಜಿನಲ್ಲಿ ಖರೀದಿಗೆ ಪಡೆಯುವ ದರಖಾಸ್ತುದಾರನಿಗೆ ಪ್ರಾಯಶಃ ಕೊಡಲ್ಪಡುವದು. ಪರಂತು ವಿಶೇಷ ಸಂದರ್ಭಗಳಲ್ಲಿ ಸದರೀ ಹರಾಜು, ಮೇಲ್ಕಂಡ ಮರಗಳ ಜಾಬುತು ಗವರ್ಮೆಂಟಿನವರ ಹಕ್ಕುದಾರೀಯು ಉಳಿಸಿಕೊಳ್ಳಲ್ಪಡುವದಕ್ಕೆ ವಳಪಟ್ಟಿರತಕ್ಕದ್ದು. ಸರಕಾರದವರು ಹಾಂಗೆ ಉಳಿಸಿಕೊಂಡಾಗ, ಸದರೀ 5—6ನೇ ಕ್ಲಾಜ್‌ಗಳಲ್ಲಿ ಕಂಡ ನಿಬಂಧನೆಗಳು ಅಂಥಾ ಮರಗಳ ಉಪಯೋಗ ಮತ್ತು ವಿಲೇವಾರಿ ವಿಷಯದಲ್ಲಿ ಲಾಗೂ ಮಾಡಲ್ಪಡತಕ್ಕದ್ದು.

10ನೇದು.—ಮೇಲಿಕಂಡ ಫೈಸಲಾತಿಗೆ ವಳಪಟ್ಟ ಮತ್ತು ಸರಕಾರ ಕಂದಾಯವು ಶಾಶ್ವತವಾಗಿ ಗೊತ್ತು ಮಾಡಲ್ಪಟ್ಟ ಜಮೀನುಗಳಿಗೆ, ಇದಕ್ಕೆ ಲಗ್ಗತ್ತಾದ A ಗುರುತ್ಳಿ ನಮೂನೆಯಲ್ಲಿ ಎಂದು ಟೈಟಲ್ ಡೀಡಿಯಾನೆ ಪಟ್ಟಿಯು ಕೊಡಲ್ಪಡುವದು. ಮೇಲೆ ಕಂಡ ಫೈಸಲಾತಿಗೆ ವಳಪಟ್ಟು ಸರಕಾರದ ಕಂದಾಯವು 30 ವರುಷಗಳ ಕಾಲಕ್ಕೆ ಗೊತ್ತು ಮಾಡಲ್ಪಟ್ಟ ಜಮೀನಿಗೆ, ಸದರೀ ಹಿಡುವಳೀ ಜಮೀನು 20 ಎಕರೆಗೆ ಜಾಸ್ತೀಯಾಗಿ ಇದ್ದರೆ, ಇದಕ್ಕೆ ಲಗ್ಗತ್ತಾದ B ಗುರುತ್ಳಿ ನಮೂನೆಯಲ್ಲಿ ಎಂದು ಟೈಟಲ್ ಡೀಡ್ ಕೊಡಲ್ಪಡುವದು. ಅಂಥಾ ಹಿಡುವಳಿ ಜಮೀನು 20 ಎಕರೆಗೆ ಜಾಸ್ತೀ ಯಿಲ್ಲದ ಪಕ್ಷದಲ್ಲಿ, ರವಿನ್ಯೂ ಸರ್ವೆ ವ ಸೆಟಲ್‌ಮೆಂಟ್ ರೂಲ್ಸ್ ಪ್ರಕಾರ ವಿಧಿಸಲ್ಪಟ್ಟ ನಮೂನೆಯಲ್ಲಿ ರೀತಿ ಕೊಡಲ್ಪಡುವದು. ಆವರೆ, ಅದರ ಷರತ್ತುಗಳು B ನಮೂನೆಯಲ್ಲಿ ಎಂದು ಟೈಟಲ್ ಡೀಡ್ ಕೊಡಲ್ಪಟ್ಟದ್ದರ ಹ್ಯಾಗೋ ಹಾಗೆದೇ ಇರತಕ್ಕವು.

ಪೀಷ್ಕಾರವಾಗಿ ವಿಂಗಡಿಸಲ್ಪಟ್ಟ ಅಲಾಹಿದಾ ತಾಕಾಗಿರುವ ಹುಲ್ಲುಗಾವಲು ಜಮೀನುಗಳಿಗೆ, ಸದರೀ ಜಮೀನು 100 ಎಕರೆಗೆ ಜಾಸ್ತೀಯಾಗಿ ಇದ್ದರೆ, ಇದಕ್ಕೆ ಲಗ್ಗತ್ತಾದ C ಗುರುತ್ಳಿ ನಮೂನೆಯಲ್ಲಿ ಎಂದು ಟೈಟಲ್ ಡೀಡ್ ಕೊಡಲ್ಪಡುವದು. ಅಂಥಾ ಹಿಡುವಳಿ ಜಮೀನು 100 ಎಕರೆಗೆ ಜಾಸ್ತಿಯಾಗಿ ಯಿಲ್ಲದಿದ್ದರೆ, ಅದಕ್ಕಾಗಿ ರವಿನ್ಯೂ ಸರ್ವೆ ವ ಸೆಟಲ್‌ಮೆಂಟ್ ರೂಲ್ಸ್‌ಗಳಿಂದ ವಿಧಿಸಲ್ಪಟ್ಟ ನಮೂನೆಯಲ್ಲಿ ಒಂದು ರೀತಿಯು ಕೊಡಲ್ಪಡುವದು. ಆ ಹಿಡುವಳಿ ಷರತ್ತುಗಳು, C ಗುರುತ್ಳಿ ನಮೂನೆಯಲ್ಲಿ ಟೈಟಲ್ ಡೀಡ್ ಕೊಡಲ್ಪಟ್ಟದ್ದರ ಹ್ಯಾಂಗೊ ಹಾಂಗೆದೇ ಇರತಕ್ಕವು.

11ನೇದು.—ಈ ಇನ್ಸ್ತ್ರುಹರ್ ನಾಮೆ ಪ್ರಕಾರ ಟೈಟಲ್ ಡೀಡ್‌ಗಳಿಗೆ ಬಾಧ್ಯತೆಯುಳ್ಳ ಯಲ್ಲಾ ಜನಗಳೂ, ಆಯಾ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರ್ ಮುಖಾಂತ್ರ ಮೈಸೂರು ದೇಶದ ರವಿನ್ಯೂ ಸರ್ವೆ ವ ಸೆಟಲ್‌ಮೆಂಟ್ ಇಲಾಖಾ ಸೂಪರ್‌ಟೆಂಡೆಂಟ್‌ರವರಿಗೆ ದರಖಾಸ್ತುಗಳು ಕಳುಹಿಸತಕ್ಕದ್ದು.

---

## A ನೆ ಮೂ ನೆ .

### ಕಾಫಿ ಟೈಟಲ್ ಡೀಡ್.

ಇದರಡಿ ಬರಿಯಲ್ಪಟ್ಟ ಷೆಡ್ಯೂಲಿನಲ್ಲಿ ನಮೂದಾದ ಜಮೀನು ಹಿಡುವಳೀದಾರನಾದ A. B. ಯಂಬುವನು, ಸದರೀ ಜಮೀನಿನ ಬಾಬತು ತನ್ನ ಹಿಡುವಳೀ ಹಕ್ಕನ್ನು ಕಾಯಂ ಮಾಡಬೇಕೆಂದು ದರಖಾಸ್ತು ಮಾಡಿರುವದರಿಂದಲೂ ಸದರೀ ಜಮೀನಿನ ಕರಾರುವಾಕಾ ಕಾಯಂ ಬಾಂಡಲಾಗವಡನ್ನು ಪಾವತೀ ಮಾಡಿ, ಸದರೀ ಜಮೀನಿಗೆ ಸಾಲ್ ವಂದಕ್ಕೆ ಎಕರೆ ವಂದಕ್ಕೆ ವಂದೂವರೆ ರೂಪಾಯಿ ಮೇರಿಗೆ ಕಾಯಂ ಜಮೀ ಕಂದಾಯವನ್ನು ಪಾವತಿ ಮಾಡುವದಕ್ಕೆ ವಪ್ಪಿ ಯಿರುವದರಿಂದಲೂ, ಮೈಸೂರು ಶೀಮೆಯಲ್ಲಿ ರವಿನ್ಯೂ ಸರ್ವೆ ವ ಸೆಟಲ್‌ಮೆಂಟ್ ಸೂಪರ್‌ಟೆಂಡೆಂಟ್ C. D. ಯಂಬ ನಾನು, ಮೈಸೂರು ಶ್ರೀಮ ಮಹಾರಾಜಾ ಸರ್ಕಾರದವರ ಹುಕ್ಕುಂ ಅನುಸರಿಸಿ, ಸದರೀ A. B. ಯಂಬುವನಿಗೂ, ಅವನ ವಾರಸುದಾರರಿಗೂ, ಆ ಪ್ರತಿನಿಧಿಗಳಿಗೂ ಮತ್ತು ಮುತ್ತಾಲೀಕರಿಗೂ ಸದರೀ ಜಮೀನನ್ನು ಕಾಯಂ ಆಸ್ತಿಯಾಗಿ, ಇದರ ಮುಂದೆ ನಮೂದು ಮಾಡಲ್ಪಟ್ಟ ನಿಯಮಗಳಿಗೂ ಸದರೀ ಜಮೀನಿನ ಕಾಯಂ ಕಂದಾಯದ ತರೀಕ ರೂಪಾಯಿಗಳನ್ನು ಸಾಲೀಯಾನಾ ಕ್ರಮವಾಗಿ ತೆರುವೆದಕ್ಕೂ ಒಳಪಟ್ಟು, ಇದರ ದೆಕೆಯಿಂದ ಕೊಡುತ್ತೇನೆ ಮತ್ತು ಕಾಯಂ ಮಾಡುತ್ತೇನೆ:—

1. ಪರಂತು, ಸದರೀ ಕಂದಾಯವು ಪ್ರತಿ ಸರಕಾರ ಸಾಲಿಗೂ ಆಯಾ ಸಾಲಿನ ಮಾರ್ಚ್ 31ನೇ ಮಕ್ಕುಮಿನಲ್ಲಾಗಲೀ ಇತ್ಥಾವರ್ಯವಾಗಲೀ ಅದನ್ನು ತೆಗದುಕೊಳ್ಳುವ ಕ್ರಮವಾದ ಆಫೀಸರರಿಗೆ ಪಾವತೀ ಮಾಡಲ್ಪಡತಕ್ಕದ್ದು. ಪಾವತೀ ಮಾಡದೆ ತಪ್ಪಿದರೆ, ಅದು ಮೈಸೂರು ಶೀಮೆಯಲ್ಲಿ ಜಮೀ ಕಂದಾಯದ ಬಾಕೀ ವಸೂಲಿ ಬಗ್ಗೆ ಜಾರೀಲಿ ಯಿರುವ ರೀತಿಯೊಗಿ ವಸೂಲ್ಮಾಡಲ್ಪಡತಕ್ಕದ್ದು.

2. ಪರಂತು, ಸದರೀ A. B. ಎಂಬುವನಾಗಲಿ ಅಥವಾ ಸದರೀ ಜಮೀನಿನ ಇತರ ನ್ಯಾಯವಾದ ಸ್ವಂತಗಾರನಾಗಲಿ ಐಯಿಂದ ಯಾವಾಗಲೂ ಸದರೀ ಜಮೀನಿನಲ್ಲಿಯೂ ಮತ್ತು ಅವರ ಸುತ್ತಲೂ ಹಾಕಿ ಇರುವ ಯಲ್ಲಿ ಗುರ್ತುಗಳನ್ನು ತನ್ನ ಹಾತ್ ಲಾಗವಿನಿಂದ ಮರಸ್ತು ಮಾಡಿಸಿ ವಳ್ಳಿ ಸ್ಥಿತಿಯಲ್ಲಿ ಇಟ್ಟುರತಕ್ಕದ್ದು. ಅದಕ್ಕೆ ತಪ್ಪಿದಲ್ಲಿ ಕ್ರಮವಾಗಿ ನೋಟಿಸ್ ಕೊಡಲ್ಪಟ್ಟ ತರುವಾಯ ಸದರಿ ಯಲ್ಲಿ

ಗುರ್ತುಗಳನ್ನು ಬುರಸ್ತು ಮಾಡಿಸಲಿಕ್ಕೂ ಮತ್ತು ಸದರೀ ಬರೆಸ್ತು ಟಾಗವಡನ್ನು ಸದರೀ A. B. ಎಂಬುವನಿಂದಲಾಗಲಿ ಯಾ ಇತರ ನ್ಯಾಯವಾದ ಸ್ವಂತಗಾರನಿಂದಲಾಗಲಿ ಕಂದಾಯದ ಬಾಕಿಯಂತೆ ವಸೂಲ್ ಮಾಡಲಿಕ್ಕೂ ಶ್ರೀಮನ್ ಮಹಾರಾಜಾ ಸರ್ಕಾರವವರಿಗೆ ನ್ಯಾಯವಾಗಿರತಕ್ಕದ್ದು.

3. ಪರಂತು, ಸಾಧಾರಣ ಕೆಲಸಗಳಿಗಾಗಲಿ ಮ್ಯುನಿಸಿಪಲ್ ವ ಇತರ ಕೆಲಸಗಳಿಗಾಗಲಿ ಕಾನೂನಿನಿಂದ ವಸೂಲ್ಮಾಡಲ್ಪಡುವ ಯಾ ವಸೂಲ್ಮಾಡಲ್ಪಡಬಹುದಾದ ಜಮ್ರ್ಾ ಕಂದಾಯದ ಶಿವಾಯಿ ಇತರ ತೀರ್ವೆಗಳಿಗೂ ಯಾ ತೆರಿಗೆಗಳಿಗೂ ಸದರೀ ಜಮೀನು ವಳಪಟ್ಟಿರತಕ್ಕದ್ದನ್ನು ಈ ಟೈಟಲ್‌ಡೀಡ್ ಯಾವ ವಿಧದಿಂದಲೂ ಬಾಧಿಸುವದಿಲ್ಲವು. ಮತ್ತು ಈ ಟೈಟಲ್‌ಡೀಡಿನ ದೆಕೆಯಿಂದ ಸದರೀ ಜಮೀನಿನಲ್ಲಿ ಇತರ ಜನಗಳಿಗೆ ಇರತಕ್ಕ ಹಕ್ಕುಗಳು ವ ಭಾವ್ಯತೆಗಳು ಯಾವ ವಿಧದಿಂದಲೂ ಬಾಧಿಸಲ್ಪಡತಕ್ಕದ್ದಲ್ಲವು.

4. ಪರಂತು, ಈ ಟೈಟಲ್‌ಡೀಡಿನಲ್ಲಿ ಅಪಗಿ ಇರುವ ಯಾವ ಅಂಶವೂ, ಸದರೀ ಜಮೀನಿನಲ್ಲಾಗಲಿ ಅದರ ಸುತ್ತಲಾಗಲಿ ಹಾಲಿ ಇರುವ ಯಲ್ಲಾ ರಸ್ತೆಗಳಲ್ಲಿಯೂ ಕಾಲುಹಾದಿಗಳಲ್ಲಿಯೂ ಆಥವಾ ಅದರಲ್ಲಿ ಯಾ ಅದರ ಸುತ್ತಲೂ ಪ್ರವಹಿಸುವ ಹೊಳೆಗಳಲ್ಲಿಯೂ ಸರ್ಕಾರದವರಿಗೆ ಅಥವಾ ಸದರೀ ಜಮೀನಿನ ಸಮೀಪದಲ್ಲಿ ಯಾ ಅಸಿಪಾಸಿನೊಳಗೆ ಇರುವ ಜರ್ಮ್ಾಗಳ ಮುಖ್ಯಸ್ಥರಿಗೆ ಹಾಲಿ ಇರುವ ಯಾ ವಾಡಿಕೆಯೂವ ಹಕ್ಕುಗಳನ್ನು ಬಾಧಿಸತಕ್ಕದ್ದಲ್ಲವು.

5. ಪರಂತು, ಸದರೀ ಜಮೀನಿನ ಮೇಲಾಗಲಿ, ಆಗರ ಕೆಳಗಾಗಲಿ ಆಥವಾ ಅದರ ಯಾವ ಭಾಗದಲ್ಲಿಯಾಗಲಿ ಇರುವಂತೆ ತಿಳಿದು ಬರುವ ಅಥವಾ ಐಯಿಂದ ಯಾವಾಗಲಾದರೂ ಕಂಡು ಹಿಡಿಯಲ್ಪಡಬಹುದಾದ ರತ್ನಗಳು, ಚಿನ್ನ ವ ಇತರ ಲೋಹಪದಾರ್ಥಗಳು ಯಾ ಕಲ್ಲಿದ್ದಲು ಆಥವಾ ರತ್ನಗಳು ಚಿನ್ನ ವ ಇತರ ಲೋಹ ಪದಾರ್ಥಗಳು ಯಾ ಕಲ್ಲಿದ್ದಲುಗಳನ್ನುಂಟುಗಿರುವ ಯಾ ಉಂಟಾಗಿರುವಂತೆ ಅನುಮಸಲ್ಪಡುವ ಕಲ್ಲು ಯಾ ಬಂಜೆ ಇವುಗಳ ಬಾಬಿತು ಹಕ್ಕು, ಬಾಧ್ಯತೆ ಯಾ ಸಂಬಂಧವಾಗಲಿ, ಈ ಟೈಟಲ್‌ಡೀಡಿನ ದೆಕೆಯಿಂದ ಸದರೀ A. B. ಎಂಬುವನಿಗೂ, ಆವನ ಹಕ್ಕುದಾರರಿಗೂ, ಈ ಪ್ರತಿನಿಧಿಗಳಿಗೂ ಯಾ ಮುತಾಲೀಕರಿಗೂ ಕೊಡಲ್ಪಡುವಂತೆ ಯಾ ಅವರಲ್ಲಿ ನೆಲೆಗೊಳಿಸುವಂತೆ ಸರ್ವಥಾ ಎಣಿಸಲ್ಪಡಕೂಡದು. ಅಂಥಾ ತಮೊಂ ಹಕ್ಕುಗಳೂ ಇವರಿಂ ಕಂಡ ಷರತ್ತುಗಳಿಗೆ ಬಳಪಟ್ಟು ಮೈಸೂರು ಶ್ರೀಮನ್ ಮಹಾರಾಜಾ ಸರಕಾರಕ್ಕೆ ಇವರಿಂದ ಉಳಿಸಿಕೊಳ್ಳಲ್ಪಟ್ಟಿರುತ್ತೆ. ಅವುಗಳಾವಂದರೆ:—

(a) ಸದರೀ A. B. ಎಂಬುವನಾಗಲಿ, ಅವನ ವಾರಸುದಾರರು, ಈ ಪ್ರತಿನಿಧಿಗಳು ಯಾ ಮುತಾಲೀಕರಾಗಲಿ ಸದರೀ ಜಮೀನಿನ ಮೇಲೆ ಯಾ ಕೆಳಭಾಗದಲ್ಲಿ ಕೆಲಸನಡಿಸಿ ರತ್ನಗಳನ್ನು ಭಂಗಾರ ಯಾ ಇತರ ಲೋಹ ಪದಾರ್ಥಗಳನ್ನು ಯಾ ಕಲ್ಲಿದ್ದಲನ್ನು ಹೊಂದುವ ಬಗ್ಯೆ ದರಖಾಸ್ತು ಮಾಡಿವಲ್ಲಿ, ಅವರುಗಳ ಹಕ್ಕದಾರಿಯನ್ನು ಇತರ ದರಖಾಸ್ತುದಾರರಕ್ಕಿಂತಲೂ ಮುಂದಾಗಿ, ಸ್ ೧೮೩೧ನೇ ಇಸವಿ ಪೆಂಗಳೂರು ಪೆಬ್ರುವ್ರಿ ೨೬ನೇ ಮತ್ತು ಏನಲ್ಲಿ ಮೈಸೂರು ದಿವಾಣರವರಿಂದ ಕೊಡಲ್ಪಟ್ಟ ಇನ್ಸ್ಟ್ರುಮೆಂಟಿನೊಡನೆ ಫಾಯಿಷ್ಠಾದ ರೂಲ್ಸಿನಲ್ಲಿ ಅಡಗಿರುವ ಷರತ್ತುಗಳ ಮೇರಿಗೆ, ಸದರೀ ಗವರ್ಣಮೆಂಟಿನವರು ಯಾವಾಗಲೂ ಅಂಗೀಕರಿಸತಕ್ಕದ್ದು. ಪರಂತು, ಅಂಥಾ ಹಕ್ಕುದಾರಿಯು, ಸದರೀ ಜಮೀನಿನ ಮೇಲಗಡೆ ಯಾ ಕೆಳಭಾಗದಲ್ಲಿ ಹೊಂದಲ್ಪಡಬಹುದಾದ ಯಾ ಸಿಕ್ಕಬಹುದಾದ ರತ್ನಗಳ ಮೌಲಾಟಿನ ಕಿಮ್ಮತ್ತಿನ ಮೇಲೆ ಶೇಕಡಾ 10ಕ್ಕೆ ವಿಾರದಂತೆಯೂ ಮತ್ತು ಅಂಥಾ ಭಂಗಾರ ಯಾ ಇತರ ಲೋಹ ಪದಾರ್ಥಗಳು ಯಾ ಕಲ್ಲಿದ್ದಲ್ಲು ಇವುಗಳ ವಟ್ಟು ಹುಟ್ಟುವಳಿ ಮೇಲೆ ಶೇಕಡಾ ೫ಕ್ಕೆ ವಿಾರದಂತೆಯೂ ಸದರೀ ಗವರ್ಣಮೆಂಟಿನವರಿಂದ ತರಾಪು ಮಾಡಲ್ಪಡಬಹುದಾದ ರಾಯಲ್ಟಿಯಾನೆ ಬಂದು ರಾಜಪಾಲನ್ನು ಪಾವತೀ ಮಾಡುವದಕ್ಕೆ ವಳಪಟ್ಟಿರತಕ್ಕದ್ದು.

(b) ಸದರೀ ಗವರ್ಣಮೆಂಟಿನವರು, ಸ್ವಂತವಾಗಿಯಾಗಲಿ ಅವರ ನೌಕರ ಮಾನೇರು, ಮುತಾಲೀಕರು ಯಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಜನಗಳ ಮೂಲಕವಾಗಿಯಾಗಲಿ, ಸದರೀ ಜಮೀನಿನೆಲ್ಲಿ ಹಾಗೆ ಗಣಿಗಳ ಬಗ್ಯೆ ತಲಾಷ್ ಮಾಡುವದಕ್ಕೂ ಗಣಿ ಕೆಲಸ ನಡಿಸುವದಕ್ಕೂ ತಮ್ಮ ಇರಾದೆಯನ್ನು ಕುರಿತು 6 ತಿಂಗಳಿಗೆ ಕಡಿಮೆ ಇಲ್ಲದಂತೆ ಮುಂದಾಗಿ ಸದರೀ A. B. ಎಂಬುವನಿಗೂ, ಅವನ ವಾರಸುದಾರರಿಗೂ, ಈ ಪ್ರತಿನಿಧಿಗಳಿಗೂ ಯಾ ಮುತಾಲೀಕರಿಗೂ ಒಂದು ನೋಟಿಸನ್ನು ಕೊಡುವವರ ಮೂಲಕ ಮೇಲೆ ಕಂಡಂತೆ ಗಣಿ ಕೆಲಸ ನಡಿಸುವ ಅದಿ ಬುದ್ಧ್ಯತೆಯ ಬಗ್ಯೆ ಅವರುಗಳು ದರಖಾಸ್ತು ಮಾಡುವದಕ್ಕೆ ಅವಕಾಶ ಕೊಡಬೆ, ಸದರೀ ಜಮೀನಿನಲ್ಲಿ ಯಾವ ಗಣಿಗಳ ಬಗ್ಯೂ ತಲಾಷ್ ಮಾಡಕೂಡದು, ಯಾ ಯಾವ ಗಣಿಕೆಲಸಗಳೂ ನಡಿಸಕೊಡದು.

(c) ಸದರೀ A. B. ಎಂಬವನು, ಅವನ ವಾರಸುದಾರರು, ಈ ಪ್ರತಿನಿಧಿಗಳು ಯಾ ಮುತಾಲೀಕರಾಗಲಿ ಸದರೀ ಜಮೀನಿನಲ್ಲಿ ಯಾವದಾದರೂ ಗಣಿಗಳನ್ನು ತಲಾಷ್ ಮಾಡುವದಕ್ಕೂ ಯಾ ಯಾವದಾದರೂ ಗಣಿ ಕೆಲಸ ನಡಿಸುವದಕ್ಕೂ ಅವಿಬುದ್ಧ್ಯತೆಯ ಬಗ್ಯೆ ಮೇಲೆ ಸಮೂದಿಸಿದಂತೆ ದರಖಾಸ್ತು ಮಾಡದಿದ್ದರೆ, ಮತ್ತು ಸದರೀ ಗವರ್ಣಮೆಂಟಿನವರು ಸ್ವಂತವಾಗಿಯಾಗಲಿ, ಅವರ ನೌಕರಮಾನೇರು, ಮುತಾಲೀಕ ಯಾ ಅವರಿಂದ ಕ್ರಮವಾದ ಅಧಿಕಾರ ಪಡೆದ ಜನಗಳ ಮೂಲಕವಾಗಿಯಾಗಲಿ ಸದರೀ ಜಮೀನಿನಲ್ಲಿ ಯಾವ ಗಣಿಗಳಿಗೋಸ್ಕರವಾಗಲಿ ತಲಾಷ್ ಮಾಡುವ ಬಗ್ಯೂ ಮತ್ತು ಯಾವ ಗಣಿ ಕೆಲಸವಾದರೂ ನಡಿಸುವ ಬಗ್ಯೂ ತೀರ್ಮಾನಿಸಿದರೆ, ಆಗ ಸದರೀ ಗವರ್ಣಮೆಂಟಿನವರು, ಸ್ವಂತವಾಗಿಯಾಗಲಿ ಅವರ ನೌಕರ ಮಾನೇರು, ಮುತಾಲೀಕರು, ಕೆಲಸಗಾರರು ಮತ್ತು ಅವರಿಂದ ಕ್ರಮವಾಗಿ ಅಧಿಕಾರ ಪಡೆದ ವಿಶಿಷ್ಟ ಜನಗಳ ಮೂಲಕವಾಗಿಯಾಗಲಿ ಕುದುರೆಗಳು, ಇತರ ಜಾನವರಗಳು, ಬಂಡಿಗಳು, ವ್ಯಾಗ್ಗನ್ಗಳು, ಮತ್ತು ಇತರ ಯಾನಸಾಧನ

ಗಳು ಇವುಗಳೊಡನೆಯಾದರೂ ಅಥವಾ ಇವುಗಳಿಲ್ಲದೆಯಾದರೂ ಸದರೀ ಜಮೀನು ಯಾ ವಹಾರದಲ್ಲಿಯಾಗಲಿ ಅದರ ಮೇಲಾಗಲಿ ಸಮೀಪ ಮಾರ್ಗದಿಂದ ಯಲ್ಲಾ ಕಾಲಗಳಲ್ಲಿಯೂ ಪ್ರವೇಶಿಸುವದಕ್ಕೂ, ವಾಪಸು ಬರುವದಕ್ಕೂ, ಮರಳೀ ಪ್ರವೇಶಿಸುವದಕ್ಕೂ ಮತ್ತು ಸದರೀ ಜಮೀನಿನಲ್ಲೂ ವಹಾರದಲ್ಲೂ ಸದರೀ ರತ್ನಗಳನ್ನು, ಭಂಗಾರ ವ ಇತರ ಲೋಹ ಪದಾರ್ಥಗಳನ್ನು ಮತ್ತು ಕಲ್ಲಿದ್ದಲನ್ನು ತಲಾಷ್ ಮಾಡುವ ಬಗ್ಯೆ, ಆಬಗೆ ಕೆಲಸ ನಡಿಸುವ ಬಗ್ಯೆ, ಅವುಗಳನ್ನು ಹೊಂದುವ ಜಗ್ಯೆ ಮತ್ತು ಸಾಗಿಸಿಕೊಂಡು ಹೋಗುವ ಬಗ್ಯೆ ಯಂತ್ರಗಳನ್ನಾಗಲಿ ಯಂತ್ರಸಾಧನಗಳನ್ನಾಗಲಿ ಸ್ಥಾಪಿಸುವದಕ್ಕೂ, ಉಪಯೋಗಿಸುವದಕ್ಕೂ ಸರ್ವ ಸ್ವಾತಂತ್ರ್ಯವನ್ನೂ ವಿಷ್ಟ ಬಾಧ್ಯತೆಯನ್ನೂ ಪುಂಟಾಗಿರುವದಲ್ಲದೆ, ಸದರೀ ಜಮೀನಿನ ಮೇಲೆ ಗಣಿಗಳನ್ನು, ಹಳ್ಳಗಳನ್ನು, ಕೊರಕಲುಗಳನ್ನು ಅಗಿಯುವದಕ್ಕೂ ಕೊರಕಲ್‌ದಾರಿಗಳನ್ನೂ ನಾಲೆಗಳನ್ನು ಮಾಡುವದಕ್ಕೂ ಫಾಳಿಸಾಧನಗಳನ್ನು ಮತ್ತು ಕಾಲಿವೆಗಳನ್ನು ಉಪಯೋಗಿಸಿಕೊಳ್ಳುವದಕ್ಕೂ ಮತ್ತು ಅವುಗಳಿಂದ ಯತ್ತಬಹುದಾದ ವಿಷ್ಟ ನೀರನ್ನು ಉಪಯೋಗಿಸಿಕೊಳ್ಳುವದಕ್ಕೂ ಮತ್ತು ಸದರೀ ಗಣಿಗಳಿಂದ ಹೊಂದಬಹುದಾದ ಲೋಹ ಪದಾರ್ಥಗಳನ್ನು, ಜೇದಾರವನ್ನು, ಕಲ್ಲಿದ್ದಲನ್ನು ಮತ್ತು ಇತರ ಪದಾರ್ಥಗಳನ್ನು ಸದರೀ ಜಮೀನಿನ ಯಾವ ಭಾಗದಲ್ಯಾದರೂ ಜಪೊಯಿಸುವ ಬಗ್ಯೂ, ಇಡುವ ಬಗ್ಯೂ, ಕುಪ್ಪೆ ಹಾಕುವ ಬಗ್ಯೂ, ಸದರೀ ರತ್ನಗಳನ್ನು ಭಂಗಾರ ವ ಇತರ ಲೋಹ ಪದಾರ್ಥಗಳನ್ನು ಮತ್ತು ಕಲ್ಲಿದ್ದಲನ್ನು ಕೃಷಿ ಮಾಡಿ ಹೊಂದುವದಕ್ಕೆ ಮತ್ತು ಅವುಗಳನ್ನು ವ್ಯಾಪಾರಕ್ಕೆ ಲಾಯಖಾಗಿ ಮಾಡುವದಕ್ಕೆ ಅವಶ್ಯಕಗಳಾದ ವ ಯುಕ್ತಗಳಾದ ತಮಾಂ ಇತರ ಕೆಲಸಗಳನ್ನು ವ ಕಾರ್ಯಗಳನ್ನು ಸಾಧಾರಣವಾಗಿ ಮಾಡುವದಕ್ಕೂ ಸದರೀ ಗವರ್ನಮೆಂಟಿನವರಿಗೆ ವಿಷ್ಟ ಸ್ವಾತಂತ್ರ್ಯವೂ ಇರತಕ್ಕದ್ದು. ಪರಂತು, ಮೇಲೆ ಕಂಡಂತೆ ವ್ಯಕ್ತಿಸಿಕೊಳ್ಳಲ್ಪಟ್ಟದಾರೀ ಹಕ್ಕನ್ನು ಗವರ್ನಮೆಂಟಿನವರು ಚಲಾಯಿಸುವ ನಿಮಿತ್ಯದಿಂದಲಾಗಲಿ ಯಾ ಮೇಲೆ ಕಂಡಂತೆ ಯಾವದಾದರೂ ಯಂತ್ರಗಳನ್ನು ಯಂತ್ರಸಾಧನಗಳನ್ನು ವ ಕಟ್ಟಗಳನ್ನು ಸ್ಥಾಪಿಸಿ ಉಪಯೋಗಿಸುವದರಿಂದಲಾಗಲಿ ಸರ್ಕಾರದವರಿಂದ ಪುಳಿಸಿಕೊಳ್ಳಲ್ಪಟ್ಟ ಮೇಲೆ ಕಂಡ ವಿಷಿಷ್ಟ ಹಕ್ಕನ್ನಾಗಲಿ ಯಾವದಾದರೊಂದು ಹಕ್ಕನ್ನಾಗಲಿ ಚಲುಯಿಸುವ ಕಾರಣಗಳಿಂದಲಾಗಲಿ ಸದರೀ A. B. ಎಂಬವನಿಗೂ ಅವನ ವಾರಸುದಾರರಿಗೂ ಈ ಪ್ರತಿನಿಧಿಗಳಿಗೂ ಯಾ ಮುತಾಲೀಕರಿಗೂ ಸಂಭವಿಸುವ ವಿಶಿಷ್ಟ ನಷ್ಟಕ್ಕೂ ಸದರೀ ಸರ್ಕಾರದವರು, ಸದರೀ A. B. ಎಂಬವನಿಗೂ ಅವನ ವಾರಸುದಾರರಿಗೂ ಈ ಪ್ರತಿನಿಧಿಗಳಿಗೂ ಯಾ ಮುತಾಲೀಕರಿಗೂ ಈಡು ಮೊಬಲಗನ್ನು ಕೊಡತಕ್ಕದ್ದು ಯಾ ಪಾವತೀ ಮಾಡತಕ್ಕದ್ದು; ಇದ್ದಲ್ಲದೆ ಮೇಲೆ ನಮೂದು ಮಾಡಲ್ಪಟ್ಟ ಯಾವ ಅಂಕದಿಂದಲೂ, ಸರ್ಕಾರದವರು, ಯಾವ ಗಣಿಯನ್ನಾದರೂ, ಹಳ್ಳವನ್ನಾದರೂ ಅಥವಾ ಕೊರಕಲನ್ನಾದರೂ ಅಗಿಯುವದಕ್ಕೂ ಅಥವಾ ಕಟ್ಟಡವಾಗಲಿ 'ವಾಸಗೃಹವಾಗಲಿ ಯಾ ಅದರ ಹತ್ತಲಾಗಲಿ' ಯಾ ಪ್ರಾಕಾರವುಳ್ಳ ತೋಟವಾಗಲಿ ಹಣಿನ ತೋಟವಾಗಲಿ ಪುಂಟಾಗಿರುವ ಸದರೀ ಜಮೀನು ಮತ್ತು ಆವರಣಗಳ ಯಾವ ಭಾಗದ ಮೇಲಾಗಲಿ ಸರ್ಕಾರದವರಿಂದ ಉಳಿಸಿಕೊಳ್ಳಲ್ಪಟ್ಟ ಮೇಲೆ ಕಂಡ ಯಾವ ಹಕ್ಕುಗಳನ್ನಾಗಲಿ ಚಲಾಯಿಸುವದಕ್ಕೂ ಅವರಿಗೆ ಯಾವಾಗ್ಯೂ ಅಧಿಕಾರವಿರತಕ್ಕದ್ದಲ್ಲವೆಂದೂ ಮತ್ತು ಸದರೀ A. B. ಎಂಬುವನಿಗೂ ಅವನ ವಾರಸುದಾರರಿಗೂ ಈ ಪ್ರತಿನಿಧಿಗಳಿಗೂ ಯಾ ಮುತಾಲೀಕರಿಗೂ ಪಾವತೀ ಮಾಡತಕ್ಕ ಈಡು ಮೊಬಲಗಿನ ವಿಷಯದಲ್ಲಿ ಗವರ್ನಮೆಂಟಿನವರೂ ಸದರೀ A. B. ಎಂಬವನೂ ಅವನ ವಾರಸುದಾರರೂ ಈ ಪ್ರತಿನಿಧಿಗಳೂ ಯಾ ಮುತಾಲೀಕರೂ ಸಮ್ಮತಿಸದೆ ಇದ್ದಲ್ಲಿ, ಅಂಥಾ ಈಡು ಮೊಬಲಗನ್ನು ನಿಶ್ಚಯಿಸುವ ಬಗ್ಯೆ 1870ನೇ ಇಸವಿ ಲ್ಯಾಂಡ್ ಅಕ್ವಿಜಿಷ್ನ್ ಆಕ್ಟಿನಿಂದ ವಿಧಿಸಲ್ಪಟ್ಟಿರುವ ನಡವಳಿತದ ಮೇರಿಗೆ ಅಂಥಾ ಈಡು ಮೊಬಲಗು ವ್ಯವಸ್ಥೆ ಮಾಡಲ್ಪಡತಕ್ಕದ್ದು.

(*d*) ಸದರೀ ಜಮೀನಿನ ಮೇಲಾಗಲಿ ಅದರ ಕೆಳಭಾಗದಲ್ಲಾಗಲಿ ದೊರೆಯುವ ಮತ್ತು ಸದರೀ A. B. ಎಂಬುವನು, ಅವನ ವಾರಸುದಾರರು ಈ ಪ್ರತಿನಿಧಿಗಳು ಯಾ ಮುತಾಲೀಕರು ಇವರುಗಳು ವಾಸ್ತವ್ಯವಾಗಿ ತಮ್ಮಸ್ವಂತಕ್ಕೋಸ್ಕರ ಉಪಯೋಗಿಸುವ ಮತ್ತು ಮಾರಾಟದ ಬಗ್ಯೆ ಸಾಗಿಸಲ್ಪಡದೆ ಇರುವ ಲೋಹಗಳು ಯಾ ಕಲ್ಲಿದ್ದಲು ಯಾ ರತ್ನಗಳು ಇವುಗಳ ಶಿವಾಯಿ ಸುಣ್ಣಕಲ್ಲಿನ ಮೇಲೂ ಕಲ್ಲಿನ ಮೇಲೂ ಮತ್ತು ಇತರ ಸಾಧಾರಣ ಲೋಹ ಪದಾರ್ಥಗಳ ಮೇಲೂ ಯಾವ ರಾಜಾಯನ್ನೂ ವಸೂಲ್ಮಾಡಲ್ಪಡತಕ್ಕದ್ದಲ್ಲವು.

6. ಪರಂತು, ಇದರಡಿ ಕಂಡ ಪರತ್ತುಗಳಿಗೆ ಬಳಪಟ್ಟು, ಮೈಸೂರು ಶ್ರೀಮತ್ ಮಹಾರಾಜಾ ಸರ್ಕಾರದವರಿಂದ ಇದರ ದೆಕೆಯಿಂದ ಉಳಿಸಿಕೊಳ್ಳಲ್ಪಟ್ಟ ಈ ಮಾರ್ಜಿನ್ನಲ್ಲಿ ನಮೂದಾದ ಏಳು ತರಹೇದ ಚೌಬೀನೆ ಗಿಡಗಳ ಹಕ್ಕು ಪಾರಿಯು, ಸದರೀ A. B. ಎಂಬವನಿಗೂ, ಅವನ ವಾರಸುದಾರರಿಗೂ ಈ ಪ್ರತಿನಿಧಿಗಳಿಗೂ ಯಾ ಮುತಾಲೀಕರಿಗೂ ಈ ಟೈಟಲ್‌ಡೀಡಿನಿಂದ ಕೊಡಲ್ಪಡುವಂತೆ ಅಥವಾ ಅವರಲ್ಲಿ ನೆಲಗೊಳಿಸುವಂತೆ ಸರ್ವಥಾ ಎಣಿಸಲ್ಪಡಕೂಡದು. ಸದರೀ ಪರತ್ತುಗಳು ಯಾವಂದರೆ:—

| | |
|---|---|
| 1 ಹೊನ್ನೆ | 5 ತೇಗ |
| 2 ಲಾಲಿಗಿಡ | 6 ಕರೀಮರ |
| 3 ನಂದಿ | 7 ಗಂಧದಮರ |
| 4 ಪೂ | |

(*a*) ಸದರೀ A. B. ಎಂಬುವನು, ಅವನ ವಾರಸುದಾರರು, ಈ ಪ್ರತಿನಿಧಿಗಳು ಯಾ ಮುತಾಲೀಕರು ಸದರೀ ಜಮೀನಿನ ಮೇಲೆ ಬೆಳದಿರುವ ಯಾ ಬೆಳೆಯುವ ಸಂದಲ್ ಶಿವಾಯಿ ಇತರ ಉಳಿಸಿಕೊಳ್ಳಲ್ಪಟ್ಟ ಯಾವ ಮರವನ್ನಾಗಲಿ, ವಾಸ್ತವ್ಯವಾಗಿ ತಮ್ಮ ಸ್ವಂತ ಕೆಲಸದ ಬಗ್ಯೆ ಬಿಗರ್ ಚಾರ್ಜು ವಿಪಯೋಗಿಸಿಕೊಳ್ಳುವದಕ್ಕೆ ಯಾವಾಗಲೂ ಅವರಿಗೆ ಅವಕಾಶ ಕೊಡತಕ್ಕದ್ದು.

(b) ಸದರೀ A. B. ಎಂಬುವನು, ಅವನ ವಾರಸುದಾರರು, ಏರ್ಪ್ಯತಿನಿಧಿಗಳು ಯಾ ಮುತಾಲೀಕರು, ಸಂದಲ್ ಕಿಮಾಯಿ ಮೇಲೆ ಕಂಡ ಉಳಿಸಿಕೊಳ್ಳಲ್ಪಟ್ಟ ಮರಗಳ ಬಾಬತು ಗವರ್ಮೆಂಟಿನವರ ಹಕ್ಕನ್ನು, ಬಿಕರೀ ಕಾಲದಲ್ಲಿ ಅವುಗಳ ನ್ಯಾಯವಾದ ಅಂದಾಜಾ ಕಿಮ್ಮತ್ತಿಗೆ ಯಾವಾಗಲಾದರೂ ಕೊಂಡುಕೊಳ್ಳುವದಕ್ಕೆ ಅವರಿಗೆ ಅವಕಾಶ ಕೊಡತಕ್ಕದ್ದು.

(c) ಸಂದಲ್ ಕಿಮಾಯಿ ಮೇಲೆ ನಮೂದಾದ ಉಳಿಸಿಕೊಳ್ಳಲ್ಪಟ್ಟಗಿಡಗಳ ಬಾಬತು ಸರ್ಕಾರ ಹಕ್ಕುದಾರಿಯು, ಸದರೀ A. B. ಎಂಬವನಿಂದಲೂ ಅವನ ವಾರಸುದಾರರಿಂದಲೂ ಏರ್ಪ್ಯತಿನಿಧಿಗಳು ಯಾ ಮುತಾಲೀಕರಿಂದಲೂ ಮೇಲೆ ನಿಯಮಿಸಿದ ಪ್ರಕಾರ ಕೊಂಡುಕೊಳ್ಳಲ್ಪಡದೆ ಇರುವ ಪಕ್ಷದಲ್ಲಿ, ಸದರೀ A. B. ಎಂಬುವನು, ಅವನ ವಾರಸುದಾರರು, ಏರ್ಪ್ಯತಿನಿಧಿಗಳು ಯಾ ಮುತಾಲೀಕರು ಇವರುಗಳವಾಸ್ತವ್ಯವಾದ ಸ್ವಂತ ಉಪಯೋಗದ ಬಗ್ಗೆ ಅಲ್ಲದೆ ಅನ್ಯಥಾ ಕತ್ತರಿಸಲ್ಪಡಬಹುದಾದ ಮೇಲೆ ಕಂಡ ತಮ್ಮಾ ಉಳಿಸಿಕೊಳ್ಳಲ್ಪಟ್ಟ ಗಿಡಗಳ ಮೇಲೂ ಗವರ್ಮೆಂಟಿನವರಿಂದ ಆಗಿಂದಾಗ್ಗೆ ತಕಾವ್ ಮಾಡಲ್ಪಡುವಂಥಾ ದರದ ಪ್ರಕಾರ ಒಂದು ಸೀನಿಯರೇಜ್ ಯಾನೆ ತೀರ್ವೆಯು ವಸೂಲ್ಮಾಡಲ್ಪಡತಕ್ಕದ್ದು. ಪರಂತು ಗಂಧದ ಗಿಡಗಳನ್ನು ಕಡಿಯುವ ಮತ್ತು ವಿಲೇ ಮಾಡುವ ಹಕ್ಕುದಾರಿಯು ಯಾವಾಗಲೂ ಸರ್ಕಾರದವರಲ್ಲಿ ಉಳಿಸಿಕೊಳ್ಳಲ್ಪಟ್ಟಿರುತ್ತೆ.

ಜಮೀನಿನ ತಪಶೀಲ್.

| ಡಿಸ್ಟ್ರಿಕ್ಟು. | ತಾಲ್ಲೂಕು. | ಗ್ರಾಮ. | ಹೆಸರು ಇದ್ದರೆ, ಅದು. | ಚಕ್ಕು ಬಂದಿ. | ಸರ್ವೇ ನಂಬರು. | ಬೀಜವರಿ. | ಕಂದಾಯ. |
|---|---|---|---|---|---|---|---|
| | | | | | | | |

ಬತಾರೀಖು ನೇ ಮೊಹೆ ಸ್ಯ 188 ನೇ ಇಸವಿ.

ಮೈಸೂರು ಶ್ರೀಮನ್ ಮಹಾರಾಜಾ ಸರ್ಕಾರದವರ ಹುಕ್ಕುಂ ಬಮೋಜೀಬ್,

ರವಿನ್ಯೂ ಸರ್ವೆ ವ ಸೆಟಲ್‌ಮೆಂಟ್ ಸೂಪರ್‌ಟೆಂಡೆಂಟ್.

---

## B ನಮೂನೆ.

### ಕಾಫೀ ಟ್ಯೆಟಲ್‌ಡೀಡ್.

ಇದರಡಿ ಬರೆದಿರುವ ಷೆಡ್ಯೂಲಿನಲ್ಲಿ ನಮೂದಾದ ಜಮೀನ್ ಹಿಡುವಳಿದಾರನಾದ A. B. ಎಂಬವನು, ಗವರ್ಮೆಂಟಿನವರಿಂದ ಪಡೆದ ಜಮೀನ್‌ಗಳ ಸರ್ವೆ ವ ಸೆಟಲ್‌ಮೆಂಟಿನ ಬಗ್ಗೆ ಆಂಟುದ ರೂಲ್ಸ್ ಸದರೀ ಜಮೀನಿಗೆ ಲಾಗಾವ್ ಮಾಡಲ್ಪಡಬೇಕೆಂತಲೂ ಮತ್ತು ಸದರೀ ಜಮೀನಿನ ಮೇಲೆ ಕಂದಾಯವನ್ನು ಲಾಗಾಯಿತು 30 ವರುಷಗಳ ಕಾಲದವರಿಗೆ ಗೊತ್ತು ಮಾಡಲ್ಪಡಬೇಕೆಂತಲೂ ದರಖಾಸ್ತು ಮಾಡಿರುವದರಿಂದಲೂ ಮತ್ತು ಸದರೀ A. B ಎಂಬುವನು ಸದರೀ ಜಮೀನಿನ ಕಾಯಂ ನವಹದ್ದು ಗುರ್ತುಗಳ ಏರ್ಪಾಗವಡಿಸನ್ನು ಖಾವತಿ ಮಾಡಿರುವದರಿಂದಲೂ, ಮತ್ತು ಸದರೀ ಜಮೀನಿನ ಬಗ್ಗೆ ಸದರೀ 30 ವರುಷದ ಕಾಲದವರಿಗೆ ಸಾಲೀಯಾನಾ ರೂಪಾಯಿ ಜಮ್ಮಿ ಕಂದಾಯವನ್ನು ಖಾವತೀ ಮಾಡುವದಕ್ಕೆ ಕಬೂಲ್‌ಪಟ್ಟಿರುವದರಿಂದಲೂ, ಮೈಸೂರು ಶೀಮೆಯಲ್ಲಿ ರವಿನ್ಯೂ ಸರ್ವೆ ವ ಸೆಟಲ್‌ಮೆಂಟ್ ಸೂಪರ್‌ಟೆಂಡೆಂಟ್ C. D. ಎಂಬ ನಾನು ಮೈಸೂರು ಶ್ರೀಮನ್ ಮಹಾರಾಜಾ ಸರ್ಕಾರದವರ ಹುಕುಂ ಅನುಸರಿಸಿ, ಸರ್ವೆ ಗಾರಂಟಿಯ ಪರತ್ತುಗಳ

ಮೇರಿಗೆ ಮತ್ತು ಇದರಮುಂದೆ ನಮೂದಾದ ನಿಬಂಧನೆಗಳಿಗೂ ಮತ್ತು ತತ್ಕಾಲದಲ್ಲಿ ಜಾರೀಲಿರುವ ಕಾನೂನಿನ ಪ್ರಕಾರ ಸದರೀ ಜರ್ಮಿ ಕಂದಾಯವು ತಿದ್ದುಪಡಿ ಮಾಡಲ್ಪಡುವವರೆಗೆ ಜವಿನಾನಿನ ಕಂದಾಯದ ತರೀಕ್ ರೂಪಾಯಿಗಳನ್ನು ನಾಲೀಯೂನಾ ಕ್ರಮವಾಗಿ ಪಾವತೀ ಮಾಡಲ್ಪಡುವದಕ್ಕೂ ವಳಪಟ್ಟು ಸದರೀ ಜಮಿನಾನ್ನು ಸದರೀ A. B. ಎಂಬವನಿಗೂ ಅವನ ವಾರಸುದಾರರಿಗೂ ಐಪ್ರತಿನಿಧಿಗಳಿಗೂ ವ ಮುತಾಲೀಕರಿಗೂ ಇದರ ದೆಸೆಯಿಂದ ಕೊಡುತ್ತೇನೆ ಮತ್ತು ಕಾಯಂ ಮಾಡುತ್ತೇನೆ:—

(1) ಪರಂತು, ಸದರೀ ಕಂದಾಯವು ಪ್ರತಿ ಸರಕಾರ ಸಾಲಿಗೂ ಆಯೂ ಸಾಲಿನ ಮಾರ್ಚಿ 31ನೇ ಮುಕ್ತಾಯನಲ್ಲಾಗಲಿ ತತ್ಪೂರ್ವವಾಗಲಿ ಅದನ್ನು ತೆಗದುಕೊಳ್ಳುವ ಕ್ರಮವಾದ ಆಫೀಸರರಲ್ಲಿ ಪಾವತೀಮಾಡಲ್ಪಡತಕ್ಕದ್ದು. ಪಾವತಿ ಆಗದೆ ತಪ್ಪಿದಲ್ಲಿ ಮೈಸೂರು ತೀನೆಯಲ್ಲಿ ಜರ್ಮಿ ಕಂದಾಯದ ಬಾಕಿ ವಸೂಲಿ ಬ್ಗೈ ಜಾರೀಲಿ ಇರುವ ರೀತಿಯೊಗಿ ವಸೂಲ್ಮಾಡಲ್ಪಡತಕ್ಕದ್ದು.

(2.) ಪರಂತು, ಇದಲ್ಲದೆ, ಸದರೀ A. B. ಎಂಬವನಾಗಲೀ ಅಥವಾ ಸದರೀ ಜಮಿನಿನ ಇತರ ನ್ಯಾಯವಾದ ಸ್ವಂತಗಾರನಾಗಲಿ ಐಯಿಂದ ಯಾವಾಗಲೂ ಸದರೀ ಜಮಿನಿನಲ್ಲೂ ಅದರ ಸುತ್ತಲೂ ಹಾಕಿರುವ ಯಲ್ಲೀ ಗುರ್ತುಗಳನ್ನು ತನ್ನ ಸ್ವಂತ ಲಾಗವಡನಿಂದ ರಿೇರಿ ಮಾಡಿ ವಳ್ಳಿ ಸ್ಥಿತಿಯಲ್ಲಿ ಯಿಟ್ಟುರತಕ್ಕದ್ದು. ಅದಕ್ಕೆ ತಪ್ಪಿದಲ್ಲಿ ಕ್ರಮವಾಗಿ ನೋಟೀಸ್ ಕೊಡಲ್ಪಟ್ಟು ತರುವಾಯ ಸದರೀ ಯಲ್ಲೀ ಗುರ್ತುಗಳನ್ನು ರಿೇರ್ ಮಾಡಿಸಲಿಕ್ಕೂ ಮತ್ತು ಸದರೀ ರಿೇರಿ ಲಾಗವಡುಗಳನ್ನು ಸದರೀ A. B. ಎಂಬುವನಿಂದಲಾಗಲಿ ಯಾ ಇತರ ನ್ಯಾಯವಾದ ಸ್ವಂತಗಾರನಿಂದಲಾಗಲಿ ಕಂದಾಯದ ಬಾಕೀಯಂತೆ ವಸೂಲ್ ಮಾಡಲಿಕ್ಕೂ ಶ್ರೀವರ್ಮ ಮಹಾರಾಜಾ ಸರಕಾರದವರಿಗೆ ನ್ಯಾಯ್ಯವಾಗಿರತಕ್ಕದ್ದು.

(3.) ಪರಂತು, ಸಾಧಾರಣ ಕೆಲಸಗಳಿಗಾಗಲಿ, ಮ್ಯುನಿಸಿಪಲ್ ವ ಇತರ ಸ್ಥಳಿಕ ಕೆಲಸಗಳಿಗಾಗಲೀ ಕಾನೂ ಪ್ರಕಾರ ವಸೂಲ್ ಮಾಡಲ್ಪಡುವ ಯೂ ವಸೂಲ್ಮಾಡಲ್ಪಡಬಹುದಾದ ಜರ್ಮಿ ಕಂದಾಯದ ವಾಯಿ, ಇತರ ತೀರ್ವೆಗಳಿಗೂ ಯಾ ತೆರಿಗೆಗಳಿಗೂ ಸದರೀ ಜಮಿನು ವಳಪಟ್ಟಿರುವದ್ದು ಯಾವ ವಿಧದಿಂದಲೂ ಈ ಟೈಟಲ್ ಡೀಡ್ ಬಾಧಿಸುವದಿಲ್ಲವು. ಮತ್ತು ಇತರ ಜನಗಳಿಗೆ ಸದರೀ ಜಮಿನೀನಲ್ಲಿ ಇರುವ ಹಕ್ಕುಗಳು ವ ಬಾಧ್ಯತೆಗಳು ಈ ಟೈಟಲ್ ಡೀಡಿನ ದೆಸೆಯಿಂದ ಯಾವ ವಿಧದಲ್ಲಿಯೂ ಬಾಧಿಸಲ್ಪಡತಕ್ಕದ್ದಲ್ಲವು.

(4.) ಸದರೀ ಜಮಿನಿನಲ್ಲಿಯಾಗಲಿ ಅಥವಾ ಅದರ ಸುತ್ತಲಾಗಲಿ ಹಾಲಿ ಯಿರುವ ಯಲ್ಲ ರಸ್ತೆಗಳಲ್ಲಿಯೂ, ಮಾರ್ಗಗಳಲ್ಲಿಯೂ ಅಥವಾ ಅದರಲ್ಲಿ ಯಾಗಲಿ ಅದರ ಸುತ್ತಲಾಗಲಿ ಪ್ರವಹಿಸುವ ಹೊಳೆಗಳಲ್ಲಿಯೂ ಸಕ್ಕಾರದವರಿಗೂ ಅಥವಾ ಸದರೀ ಜಮಿನಿನ ಸಮಿಪದಲ್ಲಿಯೂದರೂ ಆನಿಪಾಸ್‌ನಲ್ಲಿಯಾದರೂ ಇರುವ ಜರ್ಮಿಗಳ ಮುಖ್ಯಸ್ತರಿಗೂ ಹಾಲಿ ಯಿರುವ ಯಾ ಮಾಡಿಕೆಯಾದ ಹಕ್ಕುಗಳನ್ನು ಈ ಟೈಟಲ್‌ಡೀಡಿನಲ್ಲಿ ಅಡಗಿರುವ ಯಾವ ಅಂಶವೂ ಬಾಧಿಸತಕ್ಕದ್ದಲ್ಲವು.

(5.) ಪರಂತು, ಸದರೀ A. B. ಎಂಬವನಿಗೂ, ಅವನ ಹಕ್ಕುದಾರನಿಗೂ, ಅವನ ಪ್ರತಿ ನಿಧಿಗಳಿಗೂ ಯಾ ಮುತಾಲೀಕರಿಗೂ ಸದರೀ ಜಮಿನಿನ ಮೇಲಾಗಲೀ, ಅದರ ಕೆಳಗಾಗಲಿ ಅಥವಾ ಅದರ ಯಾವ ಭಾಗದಲ್ಲಿಯಾಗಲಿ ಯಿರುವಂತೆ ತಿಳಿದು ಬರುವ ಅಥವಾ ಐಯಿಂದ ಯಾವಾಗಲಾದರೂ ಕಂಡು ಹಿಡಿಯಲ್ಪಡಬಹುದಾದ ರತ್ನಗಳು, ಚಿನ್ನ ವ ಇತರ ಲೋಹಪದಾರ್ಥಗಳು ಯಾ ಕಲ್ಲಿದ್ದಲು ಅಥವಾ ರತ್ನ ಚಿನ್ನ ವ ಇತರ ಲೋಹ ಪದಾರ್ಥಗಳು ಯಾ ಕಲ್ಲಿದ್ದಲು ಇವುಗಳನ್ನುಂಟಾಗಿರುವ ಯಾ ಉಂಟಾಗಿರುವಂತೆ ಊಹಿಸಲ್ಪಡುವ ಕಲ್ಲು ಯಾ ಬಂಡೆ ಇವುಗಳ ಬಾಬತು ಹಕ್ಕು ಬಾಧ್ಯತೆ ಯೂ ಸಂಬಂಧವಾಗಲಿ ಈ ಟೈಟಲ್‌ಡೀಡಿನ ದೆಸೆಯಿಂದ ಕೊಡಲ್ಪಡುವಂತೆ ಯಾ ಅವರಲ್ಲಿ ನೆಲಗೊಳಿಸುವಂತೆ ಸರ್ವಥಾ ಎಣಿಸಲ್ಪಡಕೂಡದು. ಅಂಥಾ ತರೂಂ ಹಕ್ಕುಗಳೂ ಇದರಿಂದೀ ಕಂಡ ಷರತ್ತುಗಳಿಗೆ ಒಳಪಟ್ಟು ಮೈಸೂರು ಶ್ರೀವರ್ಮ ಮಹಾರಾಜಾ ಸರಕಾರಕ್ಕೆ ಇದರಿಂದ ಉಳಿಸಿಕೊಳ್ಳಲ್ಪಟ್ಟಿರುತ್ತೆ, ಅವು ಯಾವವಂದರೆ :—

(a.) ಸದರೀ ಗವರ್ನಮೆಂಟಿನವರು, ಖಾಸಾಗಲಿ, ತಮ್ಮ ನೌಕರಮಾನೇರ ಮೂಲಕವಾಗಲಿ, ಮೂತಾಲೀಕರು ಯಾ ಅವರಿಂದ ಕ್ರಮವಾಗಿ ಅಧಿಕಾರ ಪಡೆದ ಇತರ ಜನಗಳಿಂದಲಾಗಲಿ, ಸದರೀ ಜಮಿನಿನ ಮೇಲೆ ಯಾವ ಗಣಿಕೆಲಸವನ್ನಾದರೂ ನಡಿಸುವಂತೆ ನಿಶ್ಚಯಿಸಿದರೆ, ಆಗ ಸದರೀ ಗವರ್ನಮೆಂಟಿನವರು ಸ್ವಂತವಾಗಿಯೂ, ನೌಕರುಮಾನೇರು, ಮುತಾಲೀಕರು, ಕೆಲಸಗಾರರು ಮತ್ತು ಅವರಿಂದ ಕ್ರಮವಾಗಿ ಅಧಿಕಾರ ಪಡೆದ ವಿಷ್ಯ ಜನಗಳ ಮೂಲಕವಾಗಿಯೂ ಕುದರೆಗಳು, ಇತರ ಜಾನವರಗಳು, ಬಂಡಿಗಳು, ವ್ಯಾರ್ಗಗಳು ಮತ್ತು ಇತರ ಯಾನಸಾಧನಗಳು ಇವುಗಳೊಜನೆ ಯಾವರೂ ಅಥವಾ ಇವುಗಳು ಯಿಲ್ಲದೆಯಾದರೂ ಸದರೀ ಜರ್ಮಿ ಮತ್ತು ವಕಾರದಲ್ಲಿಯೂ ಮತ್ತು ಅದರ ಮೇಲೂ ಸಮಿಪ ಮಾರ್ಗದಿಂದ ಯಲ್ಲ ಕಾಲಗಳಲ್ಲಿಯೂ ಪ್ರವೇಶಿಸುವದಕ್ಕೂ, ವಾಪಸು ಬರುವದಕ್ಕೂ, ಮರಳಿ ಪ್ರವೇಶಿಸುವದಕ್ಕೂ, ಮತ್ತು ಸದರೀ ರತ್ನಗಳನ್ನು ಭಂಗಾರ ವೆ ಇತರ ಲೋಹ ಪದಾರ್ಥಗಳನ್ನು, ಮತ್ತು ಕಲ್ಲಿದ್ದಲನ್ನು ತಲಾಷಿ ಕಿ ಹುವ ಬ್ಗೈ, ಆಬಗೆ ಕೆಲಸ ನಡಿಸುವ ಬ್ಗೈ, ಅವುಗಳನ್ನು ಹೊಂದುವಬ್ಗೈ ಮತ್ತು ಸಾಗಿಸಿಕೊಂಡು ಹೋಗುವ ಬ್ಗೈ, ಸದರೀ ಜಮಿನಿನಲ್ಲೂ, ವಕಾರದಲ್ಲೂ ಯಾವ ಯಂತ್ರಗಳನ್ನಾಗಲೀ, ಯಂತ್ರ ಸಾಧನಗಳನ್ನಾಗಲೀ ಸ್ಥಾಪಿಸುವದಕ್ಕೂ, ಉಪಯೋಗಿಸುವದಕ್ಕೂ ಸರ್ವ ಸ್ವಾತಂತ್ರ್ಯವನ್ನೂ ವಿಷಿಷ್ಟ ಬಾಧ್ಯತೆಯನ್ನೂ ಉಂಟಾಗಿರತಕ್ಕದ್ದಲ್ಲದೆ, ಸದರೀ ಜಮಿನಿನ ಮೇಲೆ ಗಣಿಗಳನ್ನು, ಹಳ್ಳಗಳನ್ನು, ಕೊರಕಲುಗಳನ್ನು ಅಗಿಯುವದಕ್ಕೂ, ಕೊರಕಲುದಾರಿಗಳನ್ನು, ನಲ್ಲಾಗಳನ್ನು ಮಾಡುವದಕ್ಕೂ, ಕೊಳವಿಸಾಧನಗಳನ್ನು ಮತ್ತು ಕಾಲುವೆಗಳನ್ನು ಉಪಯೋಗಿಸಿಕೊಳ್ಳುವದಕ್ಕೂ, ಮತ್ತು ಅವುಗಳಿಂದ ಯತ್ತ ಜುಮದಾದ ವಿಷಿಷ್ಟ ನೀರನ್ನು ಉಪ

ಯೋಗಿಸಿಕೊಳ್ಳುವದಕ್ಕೂ ಮತ್ತು ಸದರೀ ಗಣಿಗಳಿಂದ ಹೊಂದಬಹುದಾದ ಲೋಹ ಪದಾರ್ಥಗಳನ್ನು, ಜೇದಾರನ್ನು, ಕಸ ಗಳನ್ನು ಮತ್ತು ಇತರ ಪದಾರ್ಥಗಳನ್ನು ಸದರೀ ಜಮೀನಿನ ಯಾವ ಭಾಗದಲ್ಲಾದರೂ ಜಮಾಯಿಸುವ ಬಗ್ಯೂ, ಇಡುವ ಬಗ್ಯೂ, ಕುಪ್ಪೆ ಹಾಕುವಬಗ್ಯೂ ಸದರೀ ರತ್ನಗಳನ್ನು ಭಂಗಾರ ವ ಇತರ ಲೋಹಪದಾರ್ಥಗಳನ್ನು ಮತ್ತು ಕಲ್ಲಿದ್ದಲ ನ್ನು ಕೃಷಿಮಾಡಿ ಹೊಂದುವ ಬಗ್ಯೆ ಮತ್ತು ಅವುಗಳನ್ನು ವ್ಯಾಪಾರಕ್ಕೆ ಲಾಯಬಾಗಿ ಮಾಡುವ ಬಗ್ಯೆ ಸಾಧಾರಣವಾಗಿ ಅವಶ್ಯಕಗಳಾದ ವ ಯುಕ್ತಗಳಾದ ತಮಾಂ ಇತರ ಕೆಲಸಗಳನ್ನೂ ವ ಕಾರ್ಯಗಳನ್ನೂ ಮಾಡುವದಕ್ಕೂ ಸದರೀ ಗವರ್ನ್‌ಮೆಂಟಿನವರಿಗೆ ವಿಶಿಷ್ಟ ಸ್ವಾತಂತ್ರ್ಯವೂ ಇರತಕ್ಕದ್ದು. ಪರಂತು ಮೇಲೆ ಕಂಡಂತೆ ಉಳಿಸಿಕೊಳ್ಳಲ್ಪಟ್ಟ ದಾರೀ ಹಕ್ಕನ್ನು ಗವರ್ನ್‌ಮೆಂಟಿನವರು ಚಲಾಯಿಸುವದರಿಂದಲಾಗಲಿ ಅಥವಾ ಮೇಲೆ ಕಂಡಂತೆ ಯಾವದಾದರೂ ಯಂತ್ರಗ ಳನ್ನು, ಯಂತ್ರ ಸಾಧನಗಳನ್ನು ವ ಕಟ್ಟಡಗಳನ್ನು ಸ್ಥಾಪಿಸಿ ಉಪಯೋಗಿಸುವದರಿಂದಲಾಗಲಿ ಅಥವಾ ಸರ್ಕಾರದವರಿಗೆ ಉಳಿಸಿಕೊಳ್ಳಲ್ಪಟ್ಟ ಮೇಲೆ ಕಂಡ ವಿಶಿಷ್ಟ ಹಕ್ಕನ್ನಾಗಲೀ ಯಾವದಾದರೊಂದು ಹಕ್ಕನ್ನಾಗಲೀ ಚಲಾಯಿಸುವ ದರಿಂದಲಾಗಲೀ ಸದರೀ A. B. ಎಂಬುವನಿಗೂ, ಆತನ ವಾರಸುದಾರರಿಗೂ, ಈ ಪ್ರತಿ ನಿಧಿಗಳಿಗೂ ಯಾ ಮುತಾಲೀಕರಿಗೂ ಸಂಭವಿಸುವ ವಿಶಿಷ್ಟ ನಷ್ಟಕ್ಕೂ ಸದರೀ ಸರ್ಕಾರದವರು ಸದರೀ A. B. ಎಂಬುವನಿಗೂ, ಅವನ ವಾರಸುದಾರರಿಗೂ, ಈ ಪ್ರತಿನಿಧಿಗಳಿಗೂ ಯಾ ಮುತಾಲೀಕರಿಗೂ ಈಡು ಮೊಬಲಗನ್ನು ಕೊಡತಕ್ಕದ್ದು, ಯಾ ಪಾವತೀ ಮಾಡತಕ್ಕದ್ದು; ಇದಲ್ಲದೆ ಮೇಲೆ ನಮೂದು ಮಾಡಲ್ಪಟ್ಟ ಯಾವ ಅಂಕದಿಂದಲೂ, ಸರ್ಕಾರದವರು ಯಾವ ಕಟ್ಟಡವಾಗಲಿ ವಾಸಗೃಹವಾಗಲಿ ಅದರ ಹಿತ್ತಲಾಗಲಿ ಮತ್ತು ಪ್ರಾಕಾರವುಳ್ಳ ಯಾವ ತೋಟವಾಗಲೀ ಹಂಣಿನ ತೋಟವಾಗಲಿ ಇರುವ ಸದರೀ ಜಮೀನಿನ ಯಾ ವಶಾರದ ಯಾವ ಭಾಗದ ಮೇಲಾಗಲಿ ಯಾವ ಗಣಿಯನ್ನಾದರೂ ಹಳ್ಳವನ್ನಾದರೂ ಕೊರಕಲನ್ನಾದರೂ ಅಗಿಯುವದಕ್ಕೂ ಹಾನಿಗಳನ್ನು ಮಾಡುವದಕ್ಕೂ ಮತ್ತು ಸರ್ಕಾರಕ್ಕೆ ಉಳಿಸಿಕೊಳ್ಳಲ್ಪಟ್ಟ ಮೇಲೆ ಕಂಡ ಯಾವ ಹಕ್ಕನ್ನಾದರೂ ಚಲಾ ಯಿಸುವದಕ್ಕೂ ಸರ್ಕಾರದವರಿಗೆ ಯಾವ ಅಧಿಕಾರವೂ ಯಿರುವದಿಲ್ಲವು; ಇದಲ್ಲದೆ ಸದರೀ A. B. ಎಂಬುವನಿಗೂ ಅ ವನ ವಾರಸುದಾರರಿಗೂ, ಈ ಪ್ರತಿನಿಧಿಗಳಿಗೂ ಯಾ ಮುತಾಲೀಕರಿಗೂ ಪಾವತಿ ಮಾಡತಕ್ಕ ಈಡು ಮೊಬಲಗಿನ ವಿಷಯದಲ್ಲಿ ಗವರ್ನ್‌ಮೆಂಟಿನವರೂ ಸದರೀ A. B. ಎಂಬುವನೂ ಅವನ ವಾರಸುದಾರರೂ ಈ ಪ್ರತಿ ನಿಧಿಗಳೂ ಯಾ ಮುತಾಲೀಕರೂ ಸಮ್ಮತಿಸದೆ ಇದ್ದಲ್ಲಿ, ಈಡು ಮೊಬಲಗನ್ನು ನಿಶ್ಚಯಿಸುವ ಬಗ್ಯೆ 1870ನೇ ಇಸವಿ ಲ್ಯಾಂಡ್ ಆಕ್ವಿಜೀಷ್ಯನ್ ಆಕ್ಟಿನಿಂದ ವಿಧಿಸಲ್ಪಟ್ಟಿರುವ ನಡವಳಿತದ ಮೇರಿಗೆ ಅಂಥಾ ಈಡು ಮೊಬಲಗು ವ್ಯವಸ್ಥೆ ಮಾಡಲ್ಪಡತಕ್ಕದ್ದು.

(b) ಸದರೀ ಜಮೀನಿನ ಮೇಲಾಗಲೀ ಅವರ ಕೆಳಭಾಗದಲ್ಲಾಗಲೀ ದೊರೆಯುವ ಮತ್ತು ಸದರೀ A. B. ಎಂಬುವನು, ಅವನ ವಾರಸುದಾರರು, ಈ ಪ್ರತಿನಿಧಿಗಳು ಯಾ ಮುತಾಲೀಕರು ಇವರುಗಳು ವಾಸ್ತವ್ಯವಾಗಿ ತಮ್ಮ ಸ್ವಂತಕೋಸ್ಕರ ಉಪ ಯೋಗಿಸುವ ಮತ್ತು ವ್ಯಾಪಾರದ ಬಗ್ಯೆ ಸಾಗಿಸಲ್ಪಡದೆ ಯಿರುವ ಲೋಹಗಳು ಯಾ ಕಲ್ಲಿದ್ದಲು ಯಾ ರತ್ನಗಳು ಇವ್ಗೆ ಗಳ ಹೊರತು ಸುಣ್ಣಕಲ್ಲು, ಕಲ್ಲು, ಮತ್ತು ಇತರ ಸಾಧಾರಣ ಲೋಹಗಳು ಇವ್ಗೆಗಳನ್ನು ಬಿಗರ್ ಚಾರ್ಜ್ ಉಪ ಯೋಗಿಸುವದಕ್ಕೆ ಸದರೀ A. B. ಎಂಬುವನಿಗೂ, ಅವನ ವಾರಸುದಾರರಿಗೂ, ಈ ಪ್ರತಿನಿಧಿಗಳಿಗೂ ಯಾ ಮುತಾಲೀಕರಿ ಗೂ ಯಾವಾಗಲೂ ಅವಕಾಶ ಕೊಡತಕ್ಕದ್ದು.

(6) ಪರಂತು, ಇದರಡಿ ಕಂಡ ಷರತ್ತುಗಳಿಗೆ ಬಳಪಟ್ಟು, ಮೈಸೂರು ಮಹಾರಾಜಾ ಸರ್ಕಾರದವರಿಂದ ಇದರ ಬೆಕೆಯಿಂದ ಉಳಿ ಸಿಕೊಳಲ್ಪಟ್ಟ ಈ ಬಾಜುದಲ್ಲಿ ನಮೂದಾದ ವಿಳು ತರಹೇದ ಬೌಬೀನೆ ಗಿಡಗಳ ಹಕ್ಕು

1 ಹೊನ್ನೆ 5 ತೇಗ
2 ಲಾವಿಗಿಡ 6 ಕರೀಮರ
3 ನಂದಿ 7 ಗಂಧದಮರ
4 ಹೂ

ದಾರಿಯು ಸದರೀ A. B. ಎಂಬುವನಿಗೂ, ಅವನ ವಾರಸುದಾರರಿಗೂ, ಈ ಪ್ರತಿನಿಧಿ ಗಳಿಗೂ ಯಾ ಮುತಾಲೀಕರಿಗೂ ಈ ಟೈಟಲ್‌ಡೀಡಿನ ಬೆಕೆಯಿಂದ ಕೊಡಲ್ಪಡುವಂ ತೆ ಅಥವಾ ಅವರಲ್ಲಿ ನೆಲಗೊಳಿಸುವಂತೆ ಸರ್ವಥಾ ಎಣಿಸಲ್ಪಡಕೂಡದು. ಸದರೀ ಷರತ್ತುಗಳು ಮಾವವಂದರೆ:—

(a.) ಸದರೀ A. B. ಎಂಬುವನು, ಅವನ ವಾರಸುದಾರರು, ಈ ಪ್ರತಿನಿಧಿಗಳು ಯಾ ಮುತಾಲೀಕರು ಸದರೀ ಜಾಮೀನಿನ ಮೇಲೆ ಬೆಳದಿರುವ ಯಾ ಬೆಳೆಯುವ ಸಂದಲ್ ಹೊರತು ಉಳಿಸಿಕೊಳ್ಳಲ್ಪಟ್ಟ ಇತರ ಯಾವ ಮರವನ್ನಾಗಲೀ ವಾಸ್ತವ್ಯವಾಗಿ ತಮ್ಮ ಸ್ವಂತ ಕೆಲಸದಬಗ್ಯೆ ಬಿಗರ್ ಚಾರ್ಜ್ ಉಪಯೋಗಿಸಿಕೊಳ್ಳುವದಕ್ಕೆ ಯಾವಾಗಲೂ ಅವರಿಗೆ ಅವಕಾಶ ಕೊಡತಕ್ಕದ್ದು.

(b) ಸಂದಲ್ ಹೊರತು ಮೇಲೆ ಕಂಡ ಉಳಿಸಿಕೊಳ್ಳಲ್ಪಟ್ಟ ಮರಗಳ ಬಾಬತು ಗವರ್ನ್‌ಮೆಂಟಿನವರ ಹಕ್ಕನ್ನು ಬಿಕರೀ ಕಾಲದಲ್ಲಿ ನ್ಯಾಯವಾದ ಅಂದಾಜು ಕಿಮ್ಮತ್ತಿನ ಮೇಲೆ ಯಾವಾಗಲಾದರೂ ಸದರೀ A. B. ಎಂಬವನು, ಅವನ ವಾರಸುದಾರರು, ಈ ಪ್ರತಿನಿಧಿಗಳು ಯಾ ಮುತಾಲೀ ಕೊಂಡುಕೊಳ್ಳುವದಕ್ಕೆ ಅವರಿಗೆ ಅವಕಾಶ ಕೊಡತಕ್ಕದ್ದು.

(c.) ಸಂದಲ್ ಹೊರತು ಮೇಲೆ ನಮೂದಾದ ಉಳಿಸಿಕೊಳ್ಳಲ್ಪಟ್ಟ ಗಿಡಗಳ ಬಾಬತು ಸರ್ಕಾರಿ ಹಕ್ಕನ್ನು ಸದರೀ A. B. ಎಂಬು ವನು, ಅವನ ವಾರಸುದಾರರು, ಈ ಪ್ರತಿನಿಧಿಗಳು ಯಾ ಮುತಾಲೀಕರು ಮೇಲೆ ವಿಧಿಸಿದ ಪ್ರಕಾರ ಕೊಂಡುಕೊಳ್ಳದೆ

ಯಿರುವ ಪಕ್ಷದಲ್ಲಿ, ಸದರೀ A. B. ಎಂಬುವನು, ಅವನ ವಾರಸುದಾರರು, ಆ ಪ್ರತಿನಿಧಿಗಳು ಯಾ ಮುತಾಲೀಕರು ಇವರುಗಳ ವಾಸ್ತವ್ಯವಾದ ಸ್ವಂತ ಉಪಯೋಗದ ಬಗ್ಗೆ ಅಲ್ಲದೆ ಅನ್ಯಥಾ ಕತ್ತರಿಸಲ್ಪಡಬಹುದಾದ ಮೇಲೆ ಕಂಡ ತಮ್ಮಾಂ ಉಳಿಸಿಕೊಳ್ಳಲ್ಪಟ್ಟ ಗಿಡಗಳ ಮೇಲೂ ಗವರ್ಮೆಂಟಿನವರಿಂದ ಆಗಿಂದಾಗ್ಗೆ ಗೊತ್ತು ಮಾಡಲ್ಪಡುವಂಥಾ ದರದ ಪ್ರಕಾರ ಸೀನಿಮರೇಜ್‌ಯಾನೆ ಬಂದು ತೀರ್ವೆಯು ವಸೂಲ್ಮಾಡಲ್ಪಡತಕ್ಕದ್ದು. ಪರಂತು ಗಂಧದ ಗಿಡಗಳನ್ನು ಕಡಿಯುವ ಮತ್ತು ವಿಲೆಮಾಡುವ ಹಕ್ಕುದಾರಿಯು ಯಾವಾಗಲೂ ಸರ್ಕಾರದವರಿಗೆ ಉಳಿಸಿಕೊಳ್ಳಲ್ಪಟ್ಟಿರುತ್ತೆ.

ಜಮ್ಮಾನಿನ ತಪಶೀಲ್.

| ಡಿಸ್ಟ್ರಿಕ್ಟ್. | ತಾಲ್ಲೂಕು. | ಗ್ರಾಮ. | ಹೆಸರು ಏನಾದರೂ ಇದ್ದರೆ, ಅದು. | ಚತುರ್ಗಡಿ. | ಸರ್ವೆನಂಬರ್. | ಬೀಜವರೀ | ಕಂದಾಯ. |
|---|---|---|---|---|---|---|---|
| | | | | | | | |

ಬತಾರೀಖು ನೇ ಮಾಹೆ ಸ್ಯ 188 ನೇ ಇಸವಿ.

ಮೈಸೂರು ಶ್ರೀಮನ್ ಮಹಾರಾಜಾ ಸರ್ಕಾರದವರ ಹುಕ್ಕುಂ ಬಮೋಜೀಬ್,

ರೆವಿನ್ಯೂ ಸರ್ವೆ ವ ಸೆಟಲ್‌ಮೆಂಟ್ ಸೂಪರ್‌ಟೆಂಡೆಂಟ್.

---

## C. ನಮೂನೆ.

### (ಹುಲ್ಲುಗಾವಲ್ ಕಂದಾಯಕ್ಕೆ ಜಮ್ಮಾ ಕೊಡೋಣ.)

ಮೈಸೂರು ಶೀಮೆಯಲ್ಲಿ ರೆವಿನ್ಯೂ ಸರ್ವೆ ವ ಸೆಟಲ್‌ಮೆಂಟ್ ಸೂಪರ್‌ಟೆಂಡೆಂಟ್ C. D. ಎಂಬ ನಾನು, ಮೈಸೂರು ಶ್ರೀಮನ್ ಮಹಾರಾಜಾ ಸರ್ಕಾರದವರ ಹುಕ್ಕುಂ ಅನುಸರಿಸಿ, ಇದಕ್ಕೆ ಲಗ್ಗತ್ತಾದ ಷೆಡ್ಯೂಲ್‌ನಲ್ಲಿ ನಮೂದಿಸಲ್ಪಟ್ಟ ಜಮ್ಮಾನನ್ನು, ಹುಲ್ಲುಗಾವಲ್ ಬಗ್ಗೆಯೂ ಮತ್ತು ಸಾದೆ ಬೆಳಸುವ ಬಗ್ಗೆಯೂ ಲಾಗಾಯಿತು 30 ವರುಷಗಳ ಕಾಲದವರಿಗೆ, ಮತ್ತು ಇದರ ತರುವಾಯ ನಮೂದು ಮಾಡುವ ನಿಬಂಧನೆಗಳಿಗೂ, ಮತ್ತು ಇದಕ್ಕೆ ಮುಂದೆ ನಿಯಮಿಸುವ ಮೇರಿಗಾಗಲಿ ಅಥವಾ ತತ್ಕಾಲದಲ್ಲಿ ಜಾರೀಲಿರುವ ಕಾನೂನಿನ ಪ್ರಕಾರವಾಗಲಿ ಜಮ್ಮಾಕಂದಾಯವು ಪರಿಷ್ಕರಿಸಲ್ಪಡುವವರಿಗೂ ಲ್ಯಾಂಡ್ ರೆವಿನ್ಯೂ ಅಸೆಸ್‌ಮೆಂಟ್ ಯಾನೆ ಜಮ್ಮಾ ಕಂದಾಯವ ತರೀಕ ಸಾಲೀಯಾನಾ ರೂಪಾಯಿಗಳನ್ನ ಕ್ರಮವಾಗಿ ಪಾವತೀ ಮಾಡುವದಕ್ಕೂ ಬಳಪಟ್ಟು, A. B. ಎಂಬುವನಿಗೂ, ಅವನ ವಾರಸುದಾರರಿಗೂ, ಆ ಪ್ರತಿನಿಧಿಗಳಿಗೂ ವ ಮುಖಾಲೀಕರಿಗೂ ಇದರ ದೆಶೆಯಿಂದ ಕೊಡುತ್ತೇನೆ;—

(1) ಪರಂತು, ಕಂದಾಯವು, ಪ್ರತಿ ಸರಕಾರ ಸಾಲಿಗೂ ಅಯಾ ಸಾಲಿನ ಮಾರ್ಚೀ 31ನೇ ಮುಕ್ತಂನಲ್ಲಾಗಲೀ ತತ್ಪೂರ್ವವಾಗಲೀ ಅದನ್ನು ತೆಗದುಕೊಳ್ಳುವ ಕ್ರಮವಾದ ಆಫೀಸರರಲ್ಲಿ ಪಾವತೀ ಮಾಡಲ್ಪಡತಕ್ಕದ್ದು. ಪಾವತೀ ಆಗದೇ ತಪ್ಪಿದಲ್ಲಿ ಮೈಸೂರು ಶೀಮೆಯಲ್ಲಿ ಜಮ್ಮಾ ಕಂದಾಯದ ಬಾಕೀ ವಸೂಲಿ ಬಗ್ಗೆ ಜಾರೀಲಿ ಇರುವ ರೀತಿಯಾಗಿ ವಸೂಲ್ಮಾಡಲ್ಪಡತಕ್ಕದ್ದು.

(2) ಪರಂತು, ಇದಲ್ಲದೆ, ಸದರೀ A. B. ಎಂಬುವನಾಗಲೀ ಅಥವಾ ಸದರೀ ಜಮ್ಮಾನಿನ ಇತರ ನ್ಯಾಯವಾದ ಸ್ವಂತಗಾರನಾಗಲೀ ಏಯಿಂದ ಯಾವಾಗಲೂ ಸದರೀ ಜಮ್ಮಾನಿನಲ್ಲೂ ಅದರ ಸುತ್ತಲೂ ಹಾಕಿಯಿರುವ ಯಲ್ಲೆಗುರ್ತುಗಳನ್ನು ತನ್ನ ಸ್ವಂತ ಖರ್ಚಿನಿಂದ ದುರಸ್ತು ಮಾಡಿಸಿ ವಳ್ಳೆ ಸ್ಥಿತಿಯಲ್ಲಿ ಇಟ್ಟಿರತಕ್ಕದ್ದು. ಅದಕ್ಕೆ ತಪ್ಪಿದಲ್ಲಿ ಕ್ರಮವಾಗಿ ನೋಟೀಸ್ ಕೊಡಲ್ಪಟ್ಟ ತರುವಾಯ ಸದರೀ ಯಲ್ಲೆಗುರ್ತುಗಳನ್ನು ರಿಪೇರ್ ಮಾಡಿಸಲಿಕ್ಕೂ ಮತ್ತು ಸದರೀ ರಿಪೇರ್ ಖರ್ಚುಗಳನ್ನು ಸದರೀ A. B. ಎಂಬುವನಿಂದಲಾಗಲಿ ಯಾ ಇತರ ನ್ಯಾಯವಾದ ಸ್ವಂತಗಾರನಿಂದಲಾಗಲಿ ಕಂದಾಯದ ಬಾಕೀಯಂತೆ ವಸೂಲ್ ಮಾಡಲಿಕ್ಕೂ ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನ್ಯಾಯ್ಯವಾಗಿರತಕ್ಕದ್ದು.

(3) ಪರಂತು, ಸಾಧಾರಣ ಕೆಲಸಗಳಿಗಾಗಲಿ, ಮ್ಯುನಿಸಿಪಲ್ ವ ಇತರ ಸ್ಥಳಿಕ ಕೆಲಸಗಳಿಗಾಗಲಿ ಕಾನೂ ಪ್ರಕಾರ ವಸೂಲ್ಮಾಡ ಲ್ಪಡುವ ಯಾ ವಸೂಲ್ಮಾಡಲ್ಪಡಬಹುದಾದ ಜಮೀನ್ ಕಂದಾಯದ ಕಿವಾಯಿ ಇತರ ತೀರ್ವೆಗಳಿಗೂ ಯಾ ತೆರಿಗೆಗಳಿಗೂ ಸದರೀ ಜಮೀನು ವಳಪಟ್ಟಿರುವದನ್ನು ಯಾವ ವಿಧದಿಂದಲೂ ಈ ಟೈಟಲ್‌ಡೀಡು ಭಾಧಿಸುವದಿಲ್ಲವು. ಮತ್ತು ಇತರ ಜನಗಳಿಗೆ ಸದರೀ ಜಮೀನಿನಲ್ಲಿ ಇರುವ ಹಕ್ಕುಗಳು ವ ಬಾಧ್ಯತೆಗಳು ಈ ಟೈಟಲ್‌ಡೀಡಿನ ದೆಸೆಯಿಂದ ಯಾವ ವಿಧದಲ್ಲಿಯೂ ಬಾಧಿಸಲ್ಪಡತಕ್ಕದ್ದಲ್ಲವು.

(4) ಸದರೀ ಜಮೀನಿನಲ್ಲಾಗಲಿ, ಅಥವಾ ಅದರ ಸುತ್ತಲಾಗಲಿ ಹಾಲಿ ಇರುವ ಯಲ್ಲ ರಸ್ತೆಗಳಲ್ಲಿಯೂ ಮಾರ್ಗಗಳಲ್ಲಿಯೂ ಅಥವಾ ಅದರಲ್ಲಿಯಾಗಲೀ ಅದರ ಸುತ್ತಲಾಗಲಿ ಪ್ರವಹಿಸುವ ಹೊಳೆಗಳಲ್ಲಿಯೂ ಸರ್ಕಾರದವರಿಗೆ ಅಥವಾ ಸದರೀ ಜಮೀನಿನ ಸಮೀಪದಲ್ಲಿ ದ್ದಾದರೂ ಆಸ್ ಪಾಸ್‌ನಲ್ಲಿಯಾದರೂ ಯಿರುವ ಜಮೀರ್ಗಳ ಉಪ್ಯೋಗ್ಕೆ ಹಾಲಿ ಇರುವ ಯಾ ಮಾಡಿಕೆಯೊದೆ ಹಕ್ಕುಗಳನ್ನು ಈ ಟೈಟಲ್‌ಡೀಡಿನಲ್ಲಿ ಅಡಗಿರುವ ಯಾವ ಅಂಕವೂ ಬಾಧಿಸತಕ್ಕದ್ದಲ್ಲವು.

(5) ಸದರೀ A. B. ಎಂಬುವನಿಗೂ, ಅವನ ಹಕ್ಕುದಾರರಿಗೂ ಅವನ ಪ್ರತಿನಿಧಿಗಳಿಗೂ, ಯಾ ಮುತಾಲೀಕರಿಗೂ ಸದರೀ ಜಮೀನಿನ ಮೇಲಾಗಲಿ ಅದರ ಕೆಳಗಾಗಲಿ ಅಥವಾ ಅದರ ಯಾವ ಭಾಗದಲ್ಲಿದ್ದಾಗಲಿ ಇರುವಂತೆ ತಿಳಿದುಬರುವ ಅಥವಾ ಏಯಿಂದ ಯಾವಾಗಲಾದರೂ ಕಂಡು ಹಿಡಿಯಲ್ಪಡಬಹುದಾದ ರತ್ನಗಳು, ಭಂಗಾರದ ವ ಇತರ ಲೋಹ ಪದಾರ್ಥಗಳು ಯಾ ಕಲ್ಲಿದ್ದಲು ಅಥವಾ ರತ್ನ ಭಂಗಾರ ಪ ಇತರ ಲೋಹ ಪದಾರ್ಥಗಳು ಯಾ ಕಲ್ಲಿದ್ದಲು ಇವುಗಳನ್ನು ಒಟ್ಟಾಗಿರುವ ಯಾ ಪೊಂಟಾಗಿರುವಂತೆ ಊಹಿಸಲ್ಪಡುವ/ಕಲ್ಲು ಯಾ ಲಂಜೆ ಇವುಗಳ ಬಾಬತು ಹಕ್ಕು, ಭಾಧ್ಯತೆ ಯಾ ಸಂಬಂಧವಾಗಲಿ ಈ ಟೈಟಲ್‌ಡೀಡಿನ ದೆಸೆಯಿಂದ ಕೊಡಲ್ಪಡುವಂತೆ ಯಾ ಅವರಲ್ಲಿ ಪೊಂಟುವಾಜ ಲ್ಪಡುವಂತೆ ಸರ್ವಥಾ ಎಣಿಸಲ್ಪಡಕೂಡದು. ಅಂಥಾ ಸರ್ವಾಂ ಹಕ್ಕುಗಳೂ ಮೈಸೂರು ಶ್ರೀಮಂತ ಮಹಾರಾಜಾ ಸರ್ಕಾರಕ್ಕೆ ಇದರ ದೆಸೆಯಿಂದ ಪೊಳಿಸಿಕೊಳ್ಳಲ್ಪಟ್ಟಿರುವದಲ್ಲದೆ, ಸದರೀ ಗವರ್ಮೆಂಟಿನವರು ಸ್ವಂತವಾಗಿಯೂ, ಸೌಕರ್ಯವೂನೇರ ಮೂಲಕವಾಗಿಯೂ, ಮುತಾಲೀಕರು, ಕೆಲ ಸಗಾರರು ಮತ್ತು ಅವರಿಂದ ಕ್ರಮವಾಗಿ ಅಧಿಕಾರ ಪಡೆದ ವಿಷ್ಣು ಜನಗಳ ಮೂಲಕವಾಗಿಯೂ, ಕುದುರೆಗಳು, ಇತರ ಕಾಲ್ನಡಿಗಳು ಬಂಡಿಗಳು, ವ್ಯಾಗ್ಗನ್‌ಗಳು ಮತ್ತು ಇತರ ಯಾವಸಾಧನಗಳು ಇವುಗಳಿಂದಲಾದರೂ ಅಥವಾ ಇವುಗಳಲ್ಲದೆಯಾದರೂ ಸದರೀ ಜಮೀರ್ ಯಾ ವತಾರದಲ್ಲಾಗಲಿ ಅದರ ಮೇಲಾಗಲಿ ಸಮೀಪ ಮಾರ್ಗದಿಂದ ಯಲ್ಲಾ ಕಾಲಗಳಲ್ಲಿಯೂ ಪ್ರವೇಶಿಸುವದಕ್ಕೂ, ಮಾಪಸು ಬರುವದಕ್ಕೂ, ಮೆರವೇ ಪ್ರವೇಶಿಸುವದಕ್ಕೂ, ಮತ್ತು ಸದರೀ ರತ್ನಗಳನ್ನು ಭಂಗಾರ ವ ಇತರ ಲೋಹ ಪದಾರ್ಥಗಳನ್ನು ಮತ್ತು ಕಲ್ಲಿದ್ದಲ್ಲನ್ನೂ ತಲಾಷ್ ಮಾಡುವ ಬ್ಯೆ, ಆ ಬಗೆ ಕೆಲಸ ನಡಿಸುವ ಬ್ಯೆ, ಅವುಗಳನ್ನು ಹೊಂದುವ ಬ್ಯೆ ಮತ್ತು ಸಾಗಿಸಿಕೊಂಡು ಹೋಗುವ ಬ್ಯೆ ಸದರೀ ಜಮೀನಿನಲ್ಲಿ ಮತ್ತು ವತಾರದಲ್ಲಿ ಯಾವ ಯಂತ್ರವನ್ನಾಗಲಿ ಯಂತ್ರಸಾಧನಗಳನ್ನಾಗಲಿ ಸ್ಥಾಪಿಸುವದಕ್ಕೂ, ಪ್ರಯೋಗಿಸುವದ ಕ್ಕೂ ಸಂಪೂರ್ಣ ಸ್ವಾತಂತ್ರವನ್ನೂ ವಿಷ್ಣು ಬಾಧ್ಯತೆಯನ್ನೂ ಸದರೀ ಗವರ್ಮೆಂಟಿನವರು ತಮ್ಮಲ್ಲಿಯೇ ಪೊಳಿಸಿಕೊಂಡಿರುತ್ತಾರೆ; ಇದ ಲ್ಲದೆ ಸದರೀ ಜಮೀನಿನ ಮೇಲೆ ಗಣಿಗಳನ್ನು, ಹಳ್ಳಗಳನ್ನು, ಕೊರಕಲುಗಳನ್ನು ಅಗಿಯುವದಕ್ಕೂ, ಕೊರಕಲುದಾರಿಗಳನ್ನು ನಲ್ಲಾಗಳನ್ನು ಮಾಡುವದಕ್ಕೂ ಪೊಳಿಸಾಧನಗಳನ್ನು ಮತ್ತು ಕಾಲುವೆಗಳನ್ನು ಉಪಯೋಗಿಸಿಕೊಳ್ಳುವದಕ್ಕೂ, ಮತ್ತು ಅವುಗಳಿಂದ ಯತ್ತ ಬಹುದಾದ ಪೊಪ್ಪನೀರನ್ನು ಉಪಯೋಗಿಸಿಕೊಳ್ಳುವದಕ್ಕೂ, ಮತ್ತು ಸದರೀ ಗಣಿಗಳಿಂದ ಹೊಂದಬಹುದಾದ ಲೋಹಪದಾರ್ಥಗಳನ್ನು ಚೇದಾರನ್ನು ಕಸಗಳನ್ನು ಮತ್ತು ಇತರ ಪದಾರ್ಥಗಳನ್ನು ಸದರೀ ಜಮೀನಿನ ಯಾವ ಭಾಗದಲ್ಲಾದರೂ ಜಮೊಯಿಸುವ ಬಗ್ಯೆ, ಇಡುವ ಬಗ್ಯೆ ಕುಪ್ಪೆ ಹಾಕುವ ಬಗ್ಯೆ ಸರೀ ರತ್ನಗಳನ್ನು, ಭಂಗಾರ ವ ಇತರ ಲೋಹಪದಾರ್ಥ ಮತ್ತು ಕಲ್ಲಿದ್ದಲನ್ನು ಕೃಷಿಮಾಡಿ ಹೊಂದುವ ಬಗ್ಯೆ ವ.ತ್ತು ಅವುಗಳನ್ನು ವ್ಯಾಪಾರಕ್ಕೆ ಲಾಯಖಾಗಿ ಮಾಡುವ ಬಗ್ಯೆ ಸಾಧಾರಣವಾಗಿ ಅವಶ್ಯಕಳಾದ ವ ಯುಕ್ತಗಳಾದ ತಮಾಂ ಇತರ ಕೆಲಸಗಳನ್ನೂ ವ ಕಾರ್ಯಗಳನ್ನೂ ಮಾಡುವದಕ್ಕೂ ವಿಷ್ಣು ಸ್ವಾತಂತ್ರ್ಯವೂ ಸದರೀ ಗವರ್ಮೆಂಟಿನವರಲ್ಲಿ ಉಳಿಸಿಕೊಳ್ಳಲ್ಪಟ್ಟಿ ರುತ್ತೆ. ಆದರೆ ಇದರಲ್ಲಿ ಯಾವ ಅಂಕವು ಅಡಗಿಯಿದ್ದಾಗ್ಯೂ ಸರಿಯೆ, ಸದರಿ ಜಮೀನಿನ ಮೇಲುಗಲೀ ಅದರ ಕೆಳಭಾಗದಲ್ಲಾಗಲೀ ದೊರೆಯುವ ಮತ್ತು ಸದರೀ A. B. ಎಂಬುವನು, ಅವನ ವಾರಸುದಾರರು ಇವ ವ್ಯತಿನಿಧಿಗಳು ಯಾ ಮುತಾಲೀಕರು ವಾಸ್ತವ್ಯವಾಗಿ ತಮ್ಮ ಸ್ವಂತಕ್ಕೋಸ್ಕರ ಉಪಯೋಗಿಸುವ ಮತ್ತು ವೊರಾಟದ ಬ್ಯೆ ಸಾಗಿಸಲ್ಪಡದೆ ಯಿರುವ ಲೋಹಗಳು ಯಾ ಕಲ್ಲಿದ್ದಲು ಯಾ ರತ್ನ ಗಳು ಇವುಗಳ ಕಿವಾಯಿ ಸುಣ್ಣಕಲ್ಲು, ಕರೀಕಲ್ಲು ಮತ್ತು ಇತರ ಸಾಧಾರಣ ಲೋಹಳು ಇವುಗಳನ್ನು ಬಗರ್ ಟಾರ್ಜ್ ಉಪ ಯೋಗಿಸಿಕೊಳ್ಳುವದಕ್ಕೆ ಸದರೀ A. B. ಎಂಬುವನಿಗೂ, ಅವನ ವಾರಸುದಾರರಿಗೂ ಇವ ಪ್ರತಿನಿಧಿಗಳಿಗೂ ಯಾ ಮುತಾಲೀಕರಿಗೂ ಯಾವಾಗಲೂ ಅವಕಾಶ ಕೊಡತಕ್ಕದ್ದು.

(6.) ಪರಂತು ಇದ್ದಲ್ಲದೆ, ಮೈಸೂರು ಮಹಾರಾಜಾ ಸರ್ಕಾರದವರಿಂದ ಇದರ ದೆಸೆಯಿಂದ ಉಳಿಸಿಕೊಳ್ಳಲ್ಪಟ್ಟ ಈ ಬಾಬ್‌ದಲ್ಲಿ ನಮೂದಾದ ಬಂಧತ್ತು ಕರಹೇದ ಚಾಪೀನೆ ಮರಗಳ ಬಾಬತು ಹಕ್ಕುದಾರಿಯು ಸದರೀ A. B. ಎಂಬುವನಿಗೂ ಅವನ ವಾರಸ್ದಾರರಿಗೂ ಇವ ಪ್ರತಿ ನಿಧಿಗಳಿಗೂ ಯಾ ಮುತಾಲೀಕರಿಗೂ ಈ ಟೈಟಲ್‌ಡೀಡಿನ ದೆಸೆಯಿಂದ ಕೊಡಲ್ಪಡುವಂತೆ ಅಥವಾ ಅವರ ಲ್ಲಿ ನೆಲೊಳ್ಳಿಸುವಂತೆ ಸರ್ವಥಾ ಎಣಿಸಲ್ಪಡಕೂಡದು.

| | |
|---|---|
| 1 ಹೊನ್ನೆ | 6 ಕರೀಮರ |
| 2 ಲಾವಿಗಿಡ | 7 ಗಂಧದಮರ |
| 3 ನಂದೀ | 8 ಕಾಡು ಹುಲಸು |
| 4 ಪೂಗ | 9 ಕಾರಾಚಿ |
| 5 ತೇಗ | |

(7.) ಪರಂತು ಇದಲ್ಲದೆ, ಮೇಲೆ ನಮೂದಿಸಲ್ಪಟ್ಟ ಜಮೀನಿನ ಬೈಕೀ ಯಾವ ಭಾಗವಾದರೂ ಹುಲ್ಲುಗಾವಲ್ ವ ಸಾಬಿ ಬೆಳಸುವ ವೃದ್ಧಿಕ್ಯದ ನಿಮಿತ್ತ ಬೇರೆ ಕೆಲಸಗಳಿಗಾಗಿ ಉಳುಮೆಯಲ್ಲಿ ಹೆರುವವರ ಮೂಲಕ ಯಾವಾಗಲಾದರೂ ಉಪಯೋಗಿಸಲ್ಪಟ್ಟಿರೆ, ಅಂಥಾ ಭಾಗವು ಸ್ಪಷ್ಟವಾಗಿ ವಿಂಗಡಿಸಲ್ಪಟ್ಟ ಅಲಾಹಿದಾ ಪಾಕಿನಲ್ಲಿ ಇದ್ದ ಪಕ್ಷದಲ್ಲಿ ಅದೂ, ಅಥವಾ ಭಾಗವು ಸ್ಪಷ್ಟವಾಗಿ ವಿಂಗಡಿಸಲ್ಪಟ್ಟ ಪಾಕಿನಲ್ಲಿ ಇಲ್ಲದ ಪಕ್ಷದಲ್ಲಿ, ಮೇಲೆ ನಮೂದು ಮಾಡಲ್ಪಟ್ಟ ವಿಸ್ತೀರ್ಣ ಜಮೀನೂ, ಈ ಗೇಣಿಯು ವ್ಯಾಪಿಸುವಂಥಾ 30 ವರುಷಗಳ ಬೈಕೀ ಅಂಥಾ ಉಳುಮೆ ಕಾಲದಲ್ಲಿ ಗತಿಸಿ ಹೋಗದೆ ಬಾಕೀ ಯಿರುವೆ ಜಮೀನ್ ಈ ಕಂದಾಯದ ದರಗಳಿ ಮೇರಿಗೆ ಪೂರಾ ಕಂದಾಯ ವಸೂಲ್ಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು. ಪರಂತು, ಅಂಥಾ ಪೂರಾ ಕಂದಾಯ ಹಾಕಲ್ಪಟ್ಟಿರುವ ಜಮೀನು, ಆ ಲಾಗಾಯತು ಇತರ ತಮಾಂ ವಿಷಯಗಳಲ್ಲೂ, 1885ನೇ ಇಸವಿ ಮಾರ್ಚೀ 24ನೇ ಮುಕ್ತಂ 242ನೇ ನಂಬರ್ಯುಳ್ಳ ದಿವಾಣರವರ ಇಸ್ತಹಾರ್ ನೋಡನೆ ಫಾಯಿಷಾವ B ನಮೂನೆ ಟೈಟಲ್‌ಡೀಡಿನಿಸ ಪರತ್ತಿಗೆ ಮೇರಿಗೆ ಹಿಯುವಳಿಯಲ್ಲಿರತಕ್ಕದ್ದು.

ಜಮೀನಿಗೆ ತಪಶೀಲ್.

| ಡಿಸ್ಟ್ರಿಕ್ಟು. | ತಾಲ್ಲೂಕು. | ಗ್ರಾಮ. | ಹೆಸರು ಇದ್ದರೆ, ಅದು. | ಬೆಳ್ತು ಎಂದಿ. | ಸರ್ವೆ ನಂಬರು. | ಖೀಜವು | ಕಂದಾಯ. |
|---|---|---|---|---|---|---|---|
| | | | | | | | |

ಬತಾರೀಖು ನೇ ಮೇಹೆ ಸ್ಯ 188 ನೇ ಇಸವಿ.

ಮೈಸೂರು ಶ್ರೀಮತ್ ಮಹಾರಾಜಾ ಸರ್ಕಾರದವರ ಹುಕ್ಕುಂ ಬಮೋಜಿಬ್,

ರೆವಿನ್ಯೂ ಸರ್ವೆ ವ ಸೆಟಲ್‌ಮೆಂಟ್ ಸೂಪರಿಂಟೆಂಡೆಂಟ್.

---

ತಾರೀಖು 12ನೇ ಮಾರ್ಚೀ 1883.

ನಂ. 84.—ಕಾರ್ಯರ್ಥ ದಿವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಿನ್ನೆ ಹಿಂದಿನ ದಿನ ಸೆಕ್ರಟೇರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಅರ್ಜೀದಾರರು ಶುಕ್ರವಾರಗಳ ದಿನ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

ಬಮೋಜಿಬ್ ಹುಕ್ಕುಂ,

ಆರ್. ವಿಜಯೀಂದ್ರರಾವ್,

ಸೆಕ್ರಟೆರಿ.